ಅಪರಂಜಿ

ನಗೆಯ ಕಾರಂಜಿ



ಬಿಡಿಪ್ರತಿ :

ಸಂಪುಟ-
ಸಂಚಿಕೆ-

ಅ ಪ ರ ಂ ಜಿ

ಗೌರವ ಸಲಹೆಗಾರರು :

ಶ್ರೀ ಅ.ರಾ.ಸೇ

ಶ್ರೀ ಶೇಷಗಿರಿ

ಸಂಪಾದಕರು ಮತ್ತು ಪ್ರಕಾಶಕರು :

ಶ್ರೀ ಶಿವಕುಮಾರ್

ವಾರ್ಷಿಕ ಚಂದಾ : ರೂ. 15-00

ಮ ನ ವಿ

ಅಪರಂಜಿಗೆ ಸಾರ್ವಜನಿಕರಿಂದ ಆಶಾದಾಯಕ ಪ್ರೋತ್ಸಾಹ ಕಂಡು ಬರುತ್ತಿದೆ. ಇದೇ ಮುಂದುವರಿಯಲಿ ಎಂಬುದು ನಮ್ಮೆಲ್ಲರ ಹಾರೈಕೆ. ವ್ಯಾವಹಾರಿಕ ಅನುಕೂಲಗಳಿಗಾಗಿ ಅಪರಂಜಿಯ ಆಡಳಿತ ವ್ಯವಸ್ಥೆಯಲ್ಲಿ ಹಲವು ಬದಲಾವಣೆಗಳನ್ನು ಮಾಡಿಕೊಂಡಿದ್ದೇವೆ.

ಅಪರಂಜಿಗೆ ಹೊಸ ಹಾಸ್ಯ ಆಯಾಮಗಳನ್ನು ಹುಡುಕಬಲ್ಲ ಹೊಸ ಲೇಖಕರ ಅಗತ್ಯ ಬಹಳವಾಗಿದೆ. ವ್ಯಂಗ್ಯ ಚಿತ್ರ ಹಾಗೂ ಹಾಸ್ಯ ಚುಟುಕಗಳಿಗೂ ಸುಸ್ವಾಗತ.

ಅಪರಂಜಿ ಕಾರ್ಯಾಲಯ
36, 6ನೇ ಮುಖ್ಯ ರಸ್ತೆ
ಮಲ್ಲೇಶ್ವರ
ಬೆಂಗಳೂರು-560 003

ಶಿವಕುಮಾರ್
ಸಂಪಾದಕ

ಈ ಸಂಚಿಕೆಯಲ್ಲಿ........

ವ್ಯಂಗ್ಯ ಚಿತ್ರಗಳು — ಚಂದ್ರು ಮತ್ತು ಶ್ರೀನಿವಾಸಲು

ಮುದ್ರಣ: ಇಂಪ್ರೆಷನ್ಸ್, ಮಲ್ಲೇಶ್ವರಂ. ದೂರವಾಣಿ: 32989, 369108

ಅಪರಂಜಿ

ಸಂಪುಟ—೨ ಫೆಬ್ರವರಿ ೮೫ ಸಂಚಿಕೆ—೫

ಒಂದೇ ಮರದಲ್ಲಿ ಎರಡು ಸಮಾನ ಪಕ್ಷಿಗಳಿವೆ. ಒಂದು ಸವಿಯಾದ ಹಣ್ಣನ್ನು ತಿನ್ನುತ್ತಿದೆ. ಇನ್ನೊಂದು ತಿನ್ನದೆ ನೋಡುತ್ತಿದೆ. (ಮುಂಡಕ ೩–೧–೧)


ಮುಂಡಕೋಪನಿಷತ್ತಿನಲ್ಲಿ ಕಂಡುಬರುವ ಮೇಲ್ಕಂಡ ವಾಕ್ಯವು, ಎರಡು ಪ್ರಮುಖವಾದ ಸಿದ್ಧಾಂತಗಳು ಹಾಗೂ ನೂರಾರು ಉಪಸಿದ್ಧಾಂತಗಳಿಗೆ ಎಡೆ ಗೊಟ್ಟಿದೆ. ಭಾರತದ ಪ್ರಮುಖ ಜನನಾಯಕರೊಬ್ಬರು (ಬಹುಶಃ ನೆಹರೂ ಅವರು) ಪ್ರಗತಿಯ ಫಲಗಳೆಲ್ಲ (ಅಥವಾ ಸ್ವಾತಂತ್ರ್ಯದ ?) ಎಲ್ಲಿಗೆ ಹೋಗಿವೆ ಎಂದು ಕೇಳಿದ್ದ ನೆನಪು.

ಪ್ರಜಾಪ್ರಭುತ್ವವೆಂಬ ಮರವನ್ನಾಶ್ರಯಿಸಿದ ಶ್ರೀ ಸಾಮಾನ್ಯನು ಫಲವನ್ನು ತಿನ್ನಲಾಗದೆ ಮಿಕಿ ಮಿಕಿ ನೋಡುತ್ತಿದ್ದಾನೆ. ಅದರ ಸವಿಯಾದ ಹಣ್ಣನ್ನು ತಿನ್ನುವವನು(ರು?) ಇರಲೇ ಬೇಕಲ್ಲ. ಅವರು ಅದನ್ನು ತಿನ್ನುತ್ತಿದ್ದಾರೆ. ಅವರು ಶ್ರೀ ಅ–ಸಾಮಾನ್ಯರೆಂದು ಇಟ್ಟುಕೊಳ್ಳೋಣ.

ಅದು ಹಾಗಿರಲಿ. ಭಾರತದ ಬಹು ಸಂಖ್ಯಾತರು ಒಂದುಗೂಡಿ ನಾಡಿನ ಐಕ್ಯವನ್ನು ಸೂಚಿಸಿದ್ದಾರೆ. ಆದರೆ ಗಡಿಗಳಲ್ಲಿ ನೆರೆಹೊರೆಯಲ್ಲಿ ಆಕ್ರಮಣದ ಯತ್ನಗಳು ನಡೆದೇ ಇವೆ. ಅಂಕಿ ಸಂಖ್ಯೆಗಳ ಕಸರತ್ತು ಏನೇ ಇರಲಿ, ಇಂದಿನ ಸಾಮಾನ್ಯ ಜೀವನ ಹಲವು ವಿಧದ ತಿಕ್ಕಾಟಗಳಿಗೆ ಎಡೆಗೊಡುತ್ತಿದೆ. ಇದರಿಂದಲೇ ನೆಲ–ಜಲ–ವಾಯು ಮಾಲಿನ್ಯವಾಗಿದೆಯೋ, ಅಥವಾ ಪರಿಸರದಿಂದ ಹೀಗಾಗಿದೆಯೋ ? ಬೀಜ ವೃಕ್ಷ ನ್ಯಾಯ ನಿರಂತರವಾಗಬೇಕೇ ಎಂದು ನಾವೆಲ್ಲಾ ಯೋಚಿಸೋಣ, ಅಥವಾ ಆಲೋಚಿಸೋಣವೊ !

ಕಲ್ಲು

—ವಿ. ಜಿ. ಭಟ್ಟ



ಅಮೃತ ಹಸ್ತವು ಬಂದು ಅಲ್ಲಲ್ಲಿ ಒಂದೊಂದು
ಕಲ್ ಇಡುವ ಗುಲ್ ಹಬ್ಬ ಸೊಲ್ ಸಮಾರಂಭ

ಅಲ್ಲಿ ಬಿದ್ದಿರುವ ಹಳೆಕಲ್ಲು ಇಲ್ಲಿಗೆ ಬರಲು
ಎಲ್ಲಿರದ ಸಡಗರವು ಹೊಸ ಹಸೀ ಜಂಭ !

ಕಲ್ ಇಡುವ ಕಲೆಯಲ್ಲಿ ಸಿದ್ಧ ಹಸ್ತರು ಕೆಲರು
ಕಲ್ ಹಾಕುವುದರಲ್ಲಿ ಕೆಲರ ನೈಪುಣ್ಯ

ಕಲ್ ತೂರಿ ಸಾಧಿಸುವ ನವ್ಯ ಯೋಗಕೆ ಶರಣು
ಕಲ್ಲಿನಾ ಯುಗದತ್ತ ಬಿರುಸಿನಾ ಪಯಣ

ಅಪರಂಜಿ ಕಿಡಿ

—ಆನಂದ್

ನೂತನ ಲೋಕ ಸಭೆಯು ತಾರಾ ಬಲ ಜೋರಾಗಿದೆಯಂತೆ!

* * * * *

ಬೆಂಗಳೂರಿನ ಮೂವರು ಯುವತಿಯರಿಗೆ ಕರಾಟೆ ಪ್ರಶಸ್ತಿ

—ಕ್ರೀಡಾ ವಾರ್ತೆ

ಅವರಿರುವ ಬಡಾವಣೆ ರೌಡಿಗಳು ಜಾಗರೂಕರಾಗಿರುವುದು ಕ್ಷೇಮ!

* * * * *

ಶೃಂಗೇರಿಯಲ್ಲಿ ಜನರನ್ನು ಭಯಗೊಳಿಸಿದ ಮೃಗ ಹುಲಿಯೋ ಚಿರತೆಯೋ ಖಚಿತವಲ್ಲವಂತೆ

—ಸುದ್ದಿ

ಈ ಬಗ್ಗೆ ಸರ್ಕಾರ ತಜ್ಞರನ್ನು ನೇಮಿಸುವ ಮೊದಲೇ ಮೃಗ ಕಾಡು ಸೇರಿದ್ದು ವಿಷಾದಕರ.

* * * * *

ಸಾಲ್ವೆ ಅವರು ಸೂಚಿಸಿದಂತೆ 15ನೆಯ ಆಟಗಾರರಾಗಿ ಕಪಿಲ್ ಅವರನ್ನು ಸೇರಿಸಲು ಕ್ರಿಕೆಟ್ ಮಂಡಳಿ ಒಪ್ಪಲಿಲ್ಲ.

—ಸುದ್ದಿ

ರಾಜೀವ್ ಅವರೂ ಸಾಲ್ವೆ ಬಗ್ಗೆ ಹೀಗೇ ಯೋಚಿಸಿದಂತಿದೆ!

* * * * *

ಜಡ್ಜಿಗಳಿಗೆ ಕನ್ನಡ ತರಬೇತಿ ಕಾರ್ಯಕ್ರಮ

—ಪತ್ರಿಕೆ

ನ್ಯಾಯವಾದ ಮಾತೇ!

ಇನ್ನು ಮುಂದೆ ನಾವು ಯಾವುದೇ ಭ್ರಷ್ಟಾಚಾರ ಸಹಿಸುವುದಿಲ್ಲ.

—ಎ.ಐ.ಸಿ.ಸಿ. ವಕ್ತಾರರು

ಇಷ್ಟು ದಿನ ಕಷ್ಟಪಟ್ಟು ಸಹಿಸಿದ್ದೇ ಸಾಕು ಅಂತಲೋ ?

* * * * *

ಬಡತನದ ವಿರುದ್ಧ ಹೋರಾಟ

—ಶ್ರೀ ಜನಾರ್ಧನ ಪೂಜಾರಿ

ಬಡ ಬ್ಯಾಂಕ್ ಮ್ಯಾನೇಜರುಗಳಿಂದಲೇ ಆರಂಭಿಸುತ್ತಾರೋ ?

* * * * *

ಕಾವೇರಿ ಜಲ : ಸೌಹಾರ್ದ ಒಪ್ಪಂದ ಆಶಯ

—ಶೀರ್ಷಿಕೆ

ಮಾತುಕತೆಯಲ್ಲಿ ಕಾವೇರಿ, ಜಗಳವಾಗದಿದ್ದರೆ ಸಾಕು !

ತಾ ಟ ಕಿ

ಗಂಡಸರ ಮನಸೆಳೆವ ಮೈ ಚೆಲುವು, ಹರೆಯವಿದೆ
ಬಿದ್ದಿಹವು ಹಲ್ಲುಗಳು ಮಾತ್ರ ಎಲ್ಲಾ
"ಅವಳ ನಾಲಿಗೆ ಯೇನೆ ಒದ್ದು ಕೆಡವಿರಬೇಕು
ಹಲ್ಲುಗಳ" ಅನ್ನುವನು ಅವಳ ನಲ್ಲ

ಎ.ಜಿ. ಭಟ್ಟ
(ಲಹರಿ)

ವಿರಾಟಪುರ

—ಕೇಘ

ವಿರಾಟಪುರ ಒಂದು ಊರು: ಹೆಬ್ಬಿಗುಬ್ಬಾಲೆಯಷ್ಟು ಚಿಕ್ಕದಲ್ಲ ರಾಜೀವಪುರದಷ್ಟು ದೊಡ್ಡದಲ್ಲ. ಮನೆಗಳಿವೆ, ಜನರಿದ್ದಾರೆ. ಬೀದಿದೀಪಗಳಿವೆ, ಹುಣ್ಣಿಮೆ ದಿನ ಉರಿಯುತ್ತೆ. ಅಮಾವಾಸ್ಯೆ ಆರುತ್ತದೆ. ಪ್ರೈಮರಿ ಮಿಡಲ್ ಸ್ಕೂಲುಗಳಿವೆ. ಆಸ್ಪತ್ರೆ ಇದೆ. ಡಾಕ್ಟರಿಲ್ಲ-ಜನಸುಖವಾಗಿದ್ದಾರೆ. ಗರಡಿಮನೆ ಇದೆ, ಮಾಲತೀ ನದಿ ಇದೆ. ನದಿಗೆ ಸೇತುವೆ ಇದೆ. ಸೇತುವೆ ಆಚೆ ಹೈಸ್ಕೂಲಿದೆ. ದೇವಸ್ಥಾನವಿದೆ. ದೇವರಿದ್ದಾನೆ-ಸೀತಾರಾಮನಲ್ಲ-ಪಟ್ಟಾಭಿರಾಮನೂ ಅಲ್ಲ ಕೇವಲ ಕಾಡುರಾಮ. ಸೀತೆ ಲಂಕೆಯಲ್ಲಿದ್ದಾಳೆ. ಲಕ್ಷ್ಮಣ-ಅಣ್ಣನಿಗೆ ಹಣ್ಣುಗಳನ್ನು ತರಲು ಹೋಗಿದ್ದಾನೆ. ಆಂಜನೇಯ-ಪ್ರಾಯಶಃ ಇನ್ನೂ ಸೂರ್ಯನ ಕೈಲಿ ಒದೆತಿಂತಾ ಇರಬೇಕು. ರಾಮ ನಾರು ಮಡಿಯಲ್ಲೇ ವಿರಾಟಪುರದಲ್ಲಿ ನೆಲೆಸಿದ್ದಾನೆ. ವಿರಾಟಪುರದಲ್ಲಿ ಪಂಚಾಯ್ತಿ ಇದೆ. ರಾಜಕೀಯವೂ ಇದೆ.

ಗುಂಡಣ್ಣ-ಕಾಡುರಾಮನ ಅರ್ಚಕ. ಚಿಕ್ಕಂದಿನಲ್ಲಿ ತನ್ನ ಸೋದರ ಮಾವ ಅರ್ಚಕ ಶಾಮಣ್ಣನ ಆಶ್ರಯಕ್ಕೆ ಬಂದು, ಅವರಲ್ಲೇ ಪೂಜಾದಿಗಳನ್ನು ಕಲಿತು ಮಾವನಿಗೆ ಲಕ್ವಹೊಡೆದಾಗ ತಾನೇ ಅವರ ಕೆಲ್ಸವಹಿಸಿಕೊಂಡ. ಆಗ ಗುಂಡಣ್ಣನಿಗೆ ಹನ್ನೆರಡು ವರ್ಷ-ಮುವತ್ತು ವರ್ಷಗಳ ಕೆಳಗೆ ಗುಂಡಣ್ಣ- ಬ್ರಹ್ಮಚಾರಿ, ಅಲ್ಪಸ್ವಲ ಯೋಗಾಭ್ಯಾಸ-ಸೂರ್ಯನಮಸ್ಕಾರ ಕಲ್ತಿದ್ದಾನೆ. ಆಸೆಪಟ್ಟ ಹುಡುಗರಿಗೆ ಕಲಿಸುತ್ತಾನೆ.

ವಿರಾಟಪುರದಲ್ಲಿ ಎರಡು ಪಾರ್ಟಿಗಳಿವೆ-ಕಾಡುರಾಮನ ಪಾರ್ಟಿ ಒಂದು ಇನ್ನೊಂದು-ಮಾರ್ಕ್ಸ್, ಟ್ರಾಟ್ಸ್ಕಿ, ಲೆನಿನ್, ಸ್ಟಾಲಿನ್, ಕೃಷೇವ್‌ರನ್ನೆಲ್ಲಾ ಸೇರಿಸಿ ಕಷಾಯ ಮಾಡಿಕುಡಿದಿರೋ- ಕ್ರಾಂತಿವೀರರಪಾರ್ಟಿ. ಒಟ್ಟು ಹದಿನೈದು ಜನ ಚುನಾಯಿತರಿರೋ ಪಂಚಾಯ್ತಿಯಲ್ಲಿ ಕಳೆದ ಚುನಾವಣೆಯಲ್ಲಿ ಒಂಭತ್ತು ಜನ ಕ್ರಾಂತಿ ವೀರರು ಆರ್ಸಿ ಬಂದಿದ್ದರಿಂದ ಆ ಪಾರ್ಟಿ ಮುಖಂಡ ಪೈಲ್ವಾನ್ ಪಾಲಾಕ್ಷಯ್ಯನೇ ಈಗ ವಿರಾಟಪುರದ ಪಂಚಾಯ್ತಿ ಅಧ್ಯಕ್ಷ.

ಗುಂಡಣ್ಣನಿಗೆ ತನ್ನವರ್‍ಯಾರೂ ಅಪ್ತರಿರಲಿಲ್ಲ. ತನಗೆ ಸಂಶಯ ಬಂದಾಗಲೆಲ್ಲಾ ಕಾಡುರಾಮನನ್ನೇ ಆಪ್ತನಂತೆ ಭಾವಿಸಿ ಮಾತನಾಡಿಸುತ್ತಿದ್ದ. ಕಾಡುರಾಮನ ಉತ್ತರಗಳು ಗುಂಡಣ್ಣನಿಗೆ ಮಾತ್ರ ಕೇಳುತ್ತಿದ್ದವು.

ಕ್ರಾಂತಿವೀರರು ಮಾರ್ಕ್ಸ್ ಲೆನಿನ್ ಭಕ್ತರಾದ್ದರಿಂದ ಅವರ್ಯಾರೂ ಗುಡಿಗೆ ಬರುತ್ತಿರಲಿಲ್ಲ. ಆದರೆ ತಮ್ಮ ಹೆಂಗಸರು ಮಕ್ಕಳಿಗೆ ಅಡ್ಡಿ ಮಾಡುತ್ತಿರಲಿಲ್ಲ. ತಾವು ನಂಬದೇ ಇದ್ದ ದೇವರು ಒಂದು ವೇಳೆ ಇದ್ದೇ ಬಿಟ್ಟಿದ್ದರೆ ಅವರ ಮೂಲಕ ಒಳ್ಳೇದಾಗೋದಿದ್ರೆ ಆಗ್ಲೀಂತ ಇರುತ್ತಿದ್ದರು. ಪಾಲಾಕ್ಷಯ್ಯ ಮಾತ್ರ ಪ್ರತಿದಿನ ಗರಡಿ ಮನೆಯಿಂದ ವಾಪಸು ಹೋಗುವಾಗ ಕೈಲಿಯಾವುದಾದರೂ ಹಣ್ಣುಗಳನ್ನು ಹಿಡಿದು ಕೊಂಡು ಹಾಗೇ ಬರುವ. ಆ ಸಮಯದಲ್ಲಿ ಗುಂಡಣ್ಣ-ಗುಡಿಯ ಹೊರಗೆ ಜಗಲಿಯ ಮೇಲೆ ಕುಳಿತಿರುವ. ಪಾಲಾಕ್ಷಯನೂ ಕೂರುವ.

"ಏನು ಗುಂಡಣ್ಣಾ-ಯಂಗವ್ನೆ ರಾಮು ?"

"ಆರಾಮಾಗಿದ್ದಾನಪ್ಪ-ಅವನಿಗೇನು ?"

"ಸೀತಮ್ಮ ಸಿಕ್ಕಿಲ್ಲ ಇನ್ನೂ ? "

"ಆಕೆ ಎಲ್ಲಿಗೆ ಹೋದಾಳು ಪಾಲಾಷಾ ? ಆಕೆ ಸಾಕ್ಷಾತ್ ಲಕ್ಷ್ಮಿ ಅಲ್ವೆ ?"

"ಗುಂಡಣ್ಣಾ-ನಿಂಗೊಂದ್ಹೇಳ್ಲಾ ? ಸೀತಮ್ಮಿಲ್ದಿದ್ದಕ್ಕೇ ರಾಮು ಅಷ್ಟು ಆರಾಮಾಗಿರೋದು-ಏನಂತಿ ?"

ಅನ್ನುತ್ತಾ ಜೋಕೊಂದನ್ನು ಹಾರಿಸಿ-ತಾನು ತಂದಿದ್ದ ಹಣ್ಣುಗಳಲ್ಲಿ ಕೆಲವನ್ನು ಅಲ್ಲೆಬಿಟ್ಟು ಪಾಲಾಕ್ಷಯ್ಯ ಮನೆಗೆ ಹೋಗುವ. ಇದೇ ರೀತಿಯ ಸ್ನೇಹ ಅವರಿಬ್ಬರಲ್ಲಿ ಬೆಳೆದು ಬಂದಿತ್ತು.

ವಿರಾಟಪುರದಲ್ಲಿ ನವರಾತ್ರಿ ಕಡೇ ಮೂರು ದಿನಗಳು ಜಾತ್ರೆ. ಸಂತೆ-ದೊಂಬರಾಟ-ಹುಲಿವೇಷಗಳು ವಿಜಯದಶಮಿ ದಿನ ಸ್ಪರ್ಧೆಗಳು-ಮಕ್ಕಳಿಗೆ, ದೊಡ್ಡವರಿಗೆ-ಹೆಂಗಸರಿಗೆ-ಗಂಡಸರಿಗೆ ನಡೆಯುವುವು. ಬಲಿತ ಗಂಡಸರಿಗೆ ತುಪಾಕಿ ಸ್ಪರ್ಧೆ. ಒಂದು ಎತ್ತರದ ಸ್ಥಳದಲ್ಲಿ ಒಂದು ಸಣ್ಣ ಗಂಟು ನೇತಾಡುತ್ತಿದ್ದು ಅದನ್ನು ಒಂದೇ ಹೊಡೆತದಲ್ಲಿ ಬೀಳಿಸಬೇಕು. ಪ್ರತಿ ಬಾರಿಯೂ ಪಾಲಾಕ್ಷಯ್ಯನೇ ಛಾಂಪಿಯನ್ ! ಒಂದು ಬಾರಿ ಮಾತ್ರ ಅವನು ಗುರಿಯಿಟ್ಟಿದ್ದಾಗ ಅವನ ಹಿಂದೆಯೇ ಯಾರೋ ಢಮಾರ್ !-ಅಂತ ಬೆಳ್ಳುಳ್ಳಿ ಪಟಾಸ್ ಹಾರಿಸಿ ಬಿಟ್ಟಿದ್ದರು. ಪಾಲಾಕ್ಷಯ್ಯನಿಗೆ ಗುರಿ ತಪ್ಪಿಹೋಯ್ತು. ಬಂದೂಕು ಅವನ ಕೈಯಿಂದಲೇ ಬಿದ್ದು ಹೋಗಿತ್ತು. ತಕ್ಷಣ ಪಾಲಾಕ್ಷಯ್ಯ ಆ ಪಟಾಸ್ ಹಾರಿಸಿದ್ದ ಪಠಿಂಗ ರಂಗನನ್ನು ಹಿಡಿದು ಮೂಳೆ ಮುರಿಯುವಂತೆ ಹೊಡೆದಿದ್ದ. ಪಕ್ಕದಲ್ಲಿದ್ದ ಗುಂಡಣ್ಣನಿಂದಲೂ ಪಾಲಾಕ್ಷಯ್ಯನನ್ನ ತಡೆಯೋಕಾಗಲಿಲ್ಲ. ಮರುದಿನ ಸಂಜೆ- ನಸುಕತ್ತಲು-ಪಾಲಾಕ್ಷಯ್ಯ ಒಬ್ಬನೇ

ಗರಡಿ ಮನೆಯಲ್ಲಿದ್ದ. ಮುಖಕ್ಕೆ ಮುಖವಾಡ ಧರಿಸಿ ಕೈಲಿ ಕೋಲುಗಳನ್ನ ಹಿಡಿದು ಮೂವರು ನುಗ್ಗಿದರು. ಒಬ್ಬ ತನ್ನಲ್ಲಿದ್ದ ಚೀಲದಿಂದ ಒಂದು ಬಾಟ್ಲು ತೆಗೆದ. ಒಂದು ಲೋಟ ತೆಗೆದ. ಲೋಟದ ತುಂಬ ತುಂಬಿದ-ಹರಳೆಣ್ಣೆ.

ಪಾಲಾಕ್ಷಯ್ಯ-ಕುಡೀ ಐದೆಣಿಸೋದ್ರೊಳ್ಗೆ-ಇಲ್ದಿದ್ರೆ ನಿನ್ನ ಮೂಳೆ ಒಂದಿಲ್ಲ-ಒಂದು-ಎರಡು........"

ಪಾಲಾಕ್ಷಯ್ಯ-ಮುಖವಾಡದೊಳಗಿನ ಕಣ್ಣುಗಳನ್ನು ನೋಡಿದ. ಹಣತೆಯ ದೀಪ ಆ ಕಣ್ಣುಗಳಲ್ಲಿ ಕೆಂಡವಂತೆ ಉರಿಯುತ್ತಿತ್ತು. ಲೋಟ ಖಾಲಿ ಮಾಡಿಟ್ಟ.

ಕೇವಲ ಹತ್ತು ನಿಮಿಷಗಳಲ್ಲಿ ಕಾಡುರಾಮನ ಗುಡಿಯಲ್ಲಿ........

ಗುಂಡಣ್ಣೋರೆ- ಆ ಪಾಲಾಕ್ಷ ನನ್ನನ್ನ ಒಡೀತಿದ್ದಾಗ ನೀವು ಸುಮ್ನೆ ಇದ್ರೀ ಅಲ್ಲಾ ? ಕುಡೀರಿ ಹರಳೆಣ್ಣೆ-ಒಂದು-ಎರಡು........"

ಗುಂಡಣ್ಣ ಲೋಟ ಖಾಲಿ ಮಾಡಿದ.

ಹತ್ತು ವರ್ಷಗಳು ಕಳೆದವು-ವಿರಾಟಪುರದಿಂದ ರಂಗ ಮಾಯವಾಗಿ. ಅವನೊಬ್ಬ ಕೇವಲ ದನ ಕಾಯುವ ಹುಡುಗನಾಗಿದ್ದುದರಿಂದ ಅವನ ಬಗ್ಗೆ ಯಾರಿಗೂ ಆತಂಕವಿರಲಿಲ್ಲ. ಕುತೂಹಲವೂ ಇರಲಿಲ್ಲ. ಆದರೆ ಪಾಲಾಕ್ಷಯ್ಯ ತನಗೆ ಆದ ಅವಮಾನವನ್ನು ಮರೆಯಲಿಲ್ಲ. ಯಾರ ಮುಂದೂ ಹೇಳಿಕೊಳ್ಳಲಾರ. ಮರೆಯಲಾರ. ಆ ಕೆಂಡದಂತಹ ಕಣ್ಣುಗಳನ್ನು ನೆನೆಸಿಕೊಂಡಾಗಲೆಲ್ಲಾ ಬೆವರುತ್ತಾನೆ.

ಹತ್ತು ವರ್ಷ ಕಳೆದವು. ಪಾಲಾಕ್ಷಯ್ಯ-ಪಂಚಾಯ್ತಿ ಅಧ್ಯಕ್ಷ. ಪುನಃ ನವರಾತ್ರಿ ಜಾತ್ರೆ ಸಮಯ. ನವರಾತ್ರಿ ನವಮಿ ಸಂಜೆ. ವಿರಾಟಪುರದ ರಾಜ ಬೀದಿಯಲ್ಲಿ ಹುಲಿವೇಷಗಳ ಮೆರವಣಿಗೆ. ಪಾಲಾಕ್ಷಯ್ಯ ಮತ್ತು ಅವನ ಕುಟುಂಬ ರಾಜ ಬೀದಿಯಲ್ಲಿದ್ದ ತನ್ನ ಮನೆಯ ಉಪ್ಪರಿಗೆಯ ಮೇಲೆ ನಿಂತು ದಿಮಾಕಿನಿಂದ ನೋಡುತ್ತಿದ್ದಾರೆ. ಪ್ರತಿಯೊಂದು ವೇಷವೂ ಅವನ ಮುಂದೆ ಹೆಚ್ಚು ಕುಣಿಯುತ್ತೆ. ಪಾಲಾಕ್ಷಯ್ಯ ಹಿಂದಿನ ಕಾಲದ ರಾಜರೋಪಾದಿಯಲ್ಲಿ-ಒಂದು ಚೀಲದಲ್ಲಿ ಬಹುಮಾನ ತುಂಬಿ ಎಸೆಯುತ್ತಾನೆ. ವೇಷಧಾರಿ ಸಲಾಮು ಹಾಕಿ ಮುಂದೆ ಹೋಗುತ್ತಾನೆ.

ಅದೋಂದು ಅಪೂರ್ವ ಹುಲಿ. ಅದರ ಬಣ್ಣ ವಿನ್ಯಾಸವೇ ವ್ಯತ್ಯಾಸವಾದದ್ದು, ಅದರ ಕುಣಿತವೂ ಬೇರೆ ಹುಲಿಗಳಿಗಿಂತ ವ್ಯತ್ಯಾಸವಾಗಿತ್ತು. ಪಾಲಾಕ್ಷಯ್ಯನ ಕುತೂಹಲ ಕೆರಳಿತು.

"ಯಾರ್ಲಾ ತಮ್ಮಾ ನೀನು ?" ಕೂಗಿದ ಪಾಲಾಕ್ಷಯ್ಯ.

ಹುಲಿ ಮೇಲೆ ನೋಡಿತು.

ಅದೇ ಕಿಡಿಕಾರುವ ಕಣ್ಣುಗಳಿಂದ ನೋಡಿತು.........

"ರಂಗಾ !!" ಕಿರುಚಿದ ಪಾಲಾಕ್ಷಯ್ಯ.

ಹುಲಿ ನೋಡಿತು-ಓಡಿತು. ಜನ ಗಾಬರಿಯಿಂದ ಚದುರಿದರು. ಪಾಲಾಕ್ಷಯ್ಯ ಧಡ ಧಡ ಕೆಳಗಿಳಿದು ಬಂದ.

"ಕರಿಯಣ್ಣಾ" ಅಂತ ಕೂಗಿದ.

ಕ್ರಾಂತಿವೀರ ಕರಿಯಣ್ಣ ಬಂದ.

"ಹುಲಿವೇಷ ಯಾವ ಕಡೆ ಓಡಿದ ?"

"ಗುಡಿ ಕಡೆ ಓಡಿದ."

ಒಂದು ಹರಳೆಣ್ಣೆ ಬಾಟ್ಲಿ ತಕೊಂಡುಕೊಡ್ಲೇ ಬಾ ನನ್ಹಿಂದೆ-ಅಂತ ಆಜ್ಞೆಯಿತ್ತು ಪಾಲಾಕ್ಷಯ್ಯ ಅವಸರವಸರವಾಗಿ ನಡೆದ.

ಹುಲಿ ಓಡುತ್ತ ಕಾಡು ರಾಮನಗುಡಿ ನುಗ್ಗಿತು. ಗುಂಡಣ್ಣ-ಪ್ರಕಾರದಲ್ಲಿ ತಕಲಿ ತಿರುಗಿಸುತ್ತಿದ್ದವನಿಗೆ ಅದೇನು ನಿಜವಾದ ಹುಲಿಯೋ ಚಿರತೆಯೋ-ಗೊತ್ತಾಗಲಿಲ್ಲ. ಅವನು ಚೇತರಿಸಿಕೊಳುವುದರೊಳಗಾಗಿ ಪಾಲಾಕ್ಷಯ್ಯ ಕರಿಯಣ್ಣ. ನುಗ್ಗಿದರು.

"ಗುಂಡಣ್ಣಾ, ಎಲ್ಲಿ ಆ ರಂಗ ?" ಪಾಲಾಕ್ಷಯ್ಯ ಘರ್ಜಿಸಿದ.

"ರಂಗ ? ಯಾವ ರಂಗ ?"

"ಯಾವ ರಂಗ ? ಹರಳೆಣ್ಣೆ ರಂಗ ! ಮರೆತು ಬಿಟ್ಯಾ ಗುಂಡಣ್ಣ ?"

ಗುಂಡಣ್ಣ ನಿಜವಾಗಿ ಮರೆತು ಬಿಟ್ಟಿದ್ದ. ಅಂದು-ಹತ್ತು ವರ್ಷಗಳ ಹಿಂದೆ ರಂಗ ತನಗೆ ಹರಳೆಣ್ಣೆ ಕುಡಿಸಿ ಬಿಟ್ಟು ಓಡಿದ್ದಾಗ ಗುಂಡಣ್ಣ ಕಾಡುರಾಮನಲ್ಲಿ ಹೋಗಿ ಹೇಳಿಕೊಂಡಿದ್ದ.

"ರಾಮು ನಿಜವಾಗಿ ನನಗೆ ಈ ಶಿಕ್ಷೆ ಬೇಕಾಗಿತ್ತೆ ? " ಅಂತ ಕೇಳಿದ್ದ

"ಹರಳೆಣ್ಣೆ ಶಿಕ್ಷೆಯಲ್ಲ ಗುಂಡಣ್ಣ ನಿನ್ನ ಆರೋಗ್ಯಕ್ಕೆ ಒಳ್ಳೆಯದು." ಅಂದಿದ್ದ ಕಾಡುರಾಮು.

ಈಗ ಗುಂಡಣ್ಣ ನಕ್ಕ.

"ಗುಂಡಣ್ಣಾ–ರಂಗ ಎಲ್ಲಿ ಹೇಳ್ತಿಯೋ–ಇಲ್ಲ ಗುಡೀಜಪ್ತಿ ಮಾಡ್ಬೋ" ಅಂತ ಕೇಳಿದ ಪಾಲಾಕ್ಷಯ್ಯ.

ಗುಂಡಣ್ಣ ಗಂಭೀರವಾಗಿ ಸುತ್ತಲೂ ಶೋಧನೆ ನಡೆಸಿದ. ಗುಡಿಯ ಗರ್ಭಗುಡಿ ಬಾಗಿಲು ಭದ್ರವಾಗಿ ಮುಚ್ಚಿತ್ತು.

"ಕರಿಯಣ್ಣ ಹೊರಬಾಗ್ಲು ಮುಚ್ಚು" ಅಂದ ಪಾಲಾಕ್ಷಯ್ಯ. ಕರಿಯಣ್ಣ ಪರಿಪಾಲಿಸಿದ,

"ರಂಗಾ ಹೊರಗೆ ಬರ್ತೀಯೊ–ಇಲ್ಲಾ ಬಾಗಿಲು ಒಡೆದು ಗುಂಡು ಹಾರಿಸಲಾ ? "

ನಿಶ್ಶಬ್ದ

ಗುಂಡಣ್ಣಾ–ಬಾಗಿಲು ತೆಗೆಸ್ತೀಯಾ ಇಲ್ಲಾ ನನ್ನ ಪಟಾಲಂ ಕರ್ಸಿ ಬಾಗಿಲ ವಡಿಸಲಾ ? "

"ಶಾಂತವಾಗು ಪಾಲಾಕ್ಷಯ್ಯ–ನಾ ತೆಗೆಸ್ತೀನಿ. ರಂಗಾ ರಂಗಾ ಬಾಪ್ಪಾನಾನಿದ್ದೀನೆ,"

"ಗುಂಡಣ್ಣ ನನಗೆ ದಾರಿ ಬಿಡು–ಇವತ್ತು ರಂಗನ್ನ ಹುಟ್ಟಿಲ್ಲಾ ಅನ್ನಿಸ್ಬಿಟ್ತೀನೆ"

ಗುಂಡಣ್ಣ ಬಾಗಿಲಿಗೆ ಅಡ್ಡಲಾಗಿ ನಿಂತ

"ಗುಡೀಲಿ ಗಲಾಟೆ ಬೇಡ ಪಾಲಾಕ್ಷಯ್ಯ. ಯಾರೂ ಗರ್ಭಗುಡೀಲಿ ಜಾಸ್ತಿ ಹೊತ್ತಿರೋ ಕಾಗೊಲ್ಲ–ಶಾಂತವಾಗಿರು" ಅಂದ ಗುಂಡಣ್ಣ.

"ಸರಿ–ಎರಡು ಲೋಟ ತಕೊಂಡು ಬಾ" ಪಾಲಕ್ಷಯ್ಯ ಹೇಳಿದ. ಆಶ್ಚರ್ಯವಾದರೂ ಗುಂಡಣ್ಣ ಎರಡು ಹಿತ್ತಾಳೆ ಲೋಟ ತಂದಿಟ್ಟ.

ಪಾಲಾಕ್ಷಯ್ಯ ಅವುಗಳಲ್ಲಿ ಹರಳೆಣ್ಣೆ ತುಂಬಿದ,

"ಷಹಭಾಸ್ ಪಾಲಾಕ್ಷಯ್ಯ ! "ಅಂದ ಗುಂಡಣ್ಣ.

"ಕರೀ ಆ ಬೇವಾರ್ಸೀ ಮಗನ್ನ ಹೊರಗೆ ! " ಅಂತ ಪಾಲಾಕ್ಷಯ್ಯ ಘರ್ಜಿಸಿದ,

ಗರ್ಭಗುಡೀ ಬಾಗಿಲು ಕಿರಿ ಕಿರೀತು.

ಗುಡಿಯಲ್ಲಿ ರೋಮಾಂಚಕ ಘಳಿಗೆ

ದಿಢೀರಂತ ಗರ್ಭಗುಡಿಯೊಳಗಿಂದ ಒಂದು ಝುಳಫಳಿಸುತ್ತಿದ್ದ ಕತ್ತಿಹಿಡಿದು

ಹುಲಿ ವೇಷಧಾರಿ ರಂಗ ನುಗ್ಗಿ ಬಂದ.

ಪಾಲಾಕ್ಷಾ– ಪುನಃ ಸಿಕ್ಕಿದೆ ನನ್ನ ಕೈಗೆ ಅಲ್ಲಾ ? "-ಅನ್ನುತ್ತಾ ಪಾಲಾಕ್ಷಯ್ಯನತ್ತ ಕತ್ತಿ ತಿರುಗಿಸುತ್ತಾ ನುಗ್ಗಿದ–ಟಿಪ್ಪು ನುಗ್ಗಿದ ಹಾಗೇ

ಪಾಲಾಕ್ಷಯ್ಯ ಅವಕ್ಕಾಗಿ ನೋಡಿದ-ಅದೇ ಬೆಂಕಿ ಕಾರುವ ಕಣ್ಣುಗಳು ಕರಿಯಣ್ಣ ಫಲಾಯನ ಮಾಡಿದ.

"ಇದೇನಿದು ಲೋಟಗಳಲ್ಲಿ ? ಹ ಹಾ ! ಹರಳೆಣ್ಣೆ ? ಇನ್ನೂ ನಿನ್ನ ಪಿತ್ಥ ಇಳಿದಿಲ್ಲವೇ ? "

ಪಾಲಾಕ್ಷಯ್ಯ ಬೆಚ್ಚಿ ಬೆವತು ಹೋದ.

"ಸರಿ-ನನಗೆ ಖರ್ಚು ಉಳೀತು. ಖಾಲೀ ಮಾಡು ಲೋಟಾನ—ಇಲ್ದಿದ್ರೆ ಕಾಡು ರಾಮನಿಗ ನರಬಲಿ ! -ಒಂದು-ಎರಡು-ಮೂರು-"

ಪಾಲಾಕ್ಷಯ್ಯ ಹಿಂದೂ ಮುಂದೂ ನೋಡದೆ ಒಂದು ಲೋಟ ಖಾಲಿ ಮಾಡಿ ಲೋಟಾನ ಎಸೆದು ಕರಿಯಣ್ಣ ತೆರೆದಿದ್ದ ಹೊರಬಾಗಿಲಿಂದ ಪಲಾಯನ ಮಾಡಿದ.

ರಂಗ ಕೂಡಲೇ ಆ ಬಾಗಿಲನ್ನು ಭದ್ರಪಡಿಸಿದ

ಗುಂಡಣ್ಣ ಮಾತನಾಡುವಷ್ಟು ಚೇತರಿಸಿಕೊಂಡಿದ್ದ

"ರಂಗಾ, ಇಷ್ಟುದಿನ ಎಲ್ಲಿದ್ದೆ ? ಯಾವಾಗ ಇಲ್ಲಿಗೆ ಬಂದೆ ? ಏಕಾದ್ರೋ ಈ ರೀತಿ ಬಂದೆ ? " ಅಂತ ಕೇಳಿದರು.

ರಂಗ–ಈಗ ದೊಡ್ಡ ಪಟ್ಟಣದಲ್ಲಿ ಆಟೋ ನಡಿಸ್ತಿದ್ದಾನೆ. ಅದೇಕೋ ಏನೋ ಈ ಬಾರಿ ವಿರಾಟಪುರದ ನವರಾತ್ರಿ ಜಾತ್ರೇಲಿ ವೇಷ ಹಾಕ್ಬೇಕಂ ಅನ್ನಿಸ್ತಂತೆ. ತನ್ನ ದೋಸ್ತಿಯೊಬ್ಬನ ಮೋಟಾರು ಸೈಕಲ್ ಮೇಲೆ ಹಿಂದಿನ ರಾತ್ರಿ ಊರಿಗೆ ಸೇರಿ ಹೈಸ್ಕೂಲು ಆಳು ನರಸಿಂಹನ ಮನೇಲಿ ಇಳಿದನಂತೆ. ಅಲ್ಲೇ ವೇಷ ಹಾಕ್ಕೊಂಡು ಬಂದನಂತೆ.

"ಗುಂಡಣ್ಣೋರೆ-ಇಗೋ ನಿಮ್ಮ ಸಾಲಾ ತೀರಿಸ್ತೇನೆ"—

ಅನ್ನುತ್ತಾ ಅಲ್ಲಿದ್ದ ಎರಡನೇ ಲೋಟದ ಎಣ್ಣೇನ ಘಟ ಘಟ ತಾನೇ ಕುಡಿದು ಬಿಟ್ಟು—"ನಾನೀಗ ಸ್ನಾನ ಮಾಡ್ಬೇಕು–ನಿಮ್ಮ ಕೊಟ್ಗೆ ತೋರ್ಸಿ"-ಅಂದ.

ಅಷ್ಟರಲ್ಲಿ ಗುಡಿಹೊರಗೆ ಏನೋ ಗಲಾಟೆ ಶುರುವಾಯ್ತು.

ಗುಂಡಣ್ಣ ಅವಸರವಸರವಾಗಿ ಗುಡಿ ಹಿಂಭಾಗದಲ್ಲಿದ್ದ ತನ್ನ ಕೋಣೆಗೆ ರಂಗನ್ನ ದಬ್ಬಿ-ಬಾಗಿಲು ಬಡಿದು–ಗುಡಿಯ ಹೊರದ್ವಾರವನ್ನು ತೆರೆದ.

"ಎಲ್ಲಿ ಆ ಬೇವಾರ್ಸಿ ರಂಗ ?" ಅಂತ ಕೂಗುತ್ತಾ ಪಾಲಾಕ್ಷಯ್ಯ ದೊಣ್ಣೆ ಯೊಡನೆ ತನ್ನ ಅಂಗ ರಕ್ಷಕರೊಂದಿಗೆ ನುಗ್ಗಿದ.

"ಬಾ ಪಾಲಾಕ್ಷಯ್ಯ–ನೋಡು ಆ ಪಠಿಂಗ ನಂಗೂ ಹರಳೆಣ್ಣೆ ಕುಡಿಸಿ ಹಿಂಬಾಗ್ಲಿಂದ ಓಡಿಹೋದ"–ಅನ್ನುತ್ತಾ ಎರಡನೇ ಖಾಲಿ ಲೋಟವನ್ನ ಗುಂಡಣ್ಣ ತೋರಿಸಿದ.

ಗುಂಡಣ್ಣನ ಮಾತು ಮುಗಿಯುವುದರೊಳಗೇ ಪಾಲಾಕ್ಷಯ್ಯ ತನ ಪಟಾಲಂ ಜೊತೆ ಗುಡಿಯ ಹಿಂಬಾಗಿಲಿಂದ ಓಡಿದ್ದ.

ರಾತ್ರಿ ವಿರಾಟಪುರದಲ್ಲಿ ಶಾಂತಿ ಏರ್ಪಟ್ಟ ಮೇಲೆ-ನರಸಿಂಹ ಬಂದು ರಂಗನಿಗೆ ಪ್ಯಾಂಟು ಷರ್ಟು ತೊಡಿಸಿ ಕರ್ಕೊಂಡು ಹೋದ.

ರಂಗ ಬಿಸಾಡಿದ್ದ ಕತ್ತಿಯನ್ನು ಎತ್ತಿಕೊಂಡು ಗುಂಡಣ್ಣ ಕಾಡುರಾಮನಲ್ಲಿಗೆ ಬಂದ.

"ರಾಮು, ಈ ಕತ್ತೀನ ಪಾಲಾಕ್ಷಯ್ಯನ ಕಣ್ಣಿಗೆ ಬೀಳದ ಹಾಗೆ ಮಾಡಿ-ನನ್ನನ್ನುಳಿಸಿದೆ. ನಿನಗೆ ಸಾವಿರ ನಮಸ್ಕಾರ" ಅಂದ.

"ಗುಂಡಣ್ಣ–ಈ ಕತ್ತಿ–ರಟ್ಟಿನಿಂದ ಮಾಡಿದ್ದು ಅಂತ ನಿಂಗೆ ಗೊತ್ತಿರಲಿಲ್ವೆ ?"

"ಗೊತ್ತು ಪ್ರಭು. ನಿನ್ನೆ ಬಯಲುನಾಟಕದೋರಿಗೆ ನಾನೇ ಮಾಡಿಕೊಟ್ಟಿದ್ದೆ. ನಾಟ್ಕ ಮುಗಿದ ಮೇಲೆ ನಾನೇ ಅದನ್ನ ನಿನ್ನ ಹಿಂದೆ ನಿಲ್ಲಿಸಿದ್ದೆ."

"ಹಾಗಿದ್ದರೆ ಪಾಲಾಕ್ಷಯ್ಯನಿಗಾದ ಮುಖಭಂಗ ತಪ್ಪಿಸಿಲಿಲ್ಲವೇಕೇ ?"

"ಹರಳೆಣ್ಣೆ ಆರೋಗ್ಯಕ್ಕೆ ಒಳ್ಳೇದು ಅಂತಾ ನೀನೇ ಹೇಳಿದ್ದೆಯಲ್ಲ–ಪ್ರಭು."

ಗುಂಡಣ್ಣ ಕಾಡುರಾಮನ ಮುಖ ನೋಡಿದ. ಕಾಡುರಾಮು ಮೌನವಾಗಿದ್ದ. ಅವನ ಮುಖದಲ್ಲಿ ಮಾತ್ರ ಮುಗುಳ್ನಗೆ ಇತ್ತು.



"ಪಾಪ, ಶಾವಿಗೆ ಕೊಡೋಣ ಅಂತ ಬಂದರೇ..........."

ನೋಸಮುಯುಮಿದಂ ನಾಮಾಂಕಿತಂ!

—ಲೀಲಾ ಮಿರ್ಲೆ

ನೂರೆಂಟು ಕಷ್ಟಗಳಿಂದ ಗೋಳಾಡ್ತಿರೊ ಮನುಷ್ಯರನ್ನ ನೋಡಿದ್ರೆ, ಒಮ್ಮೊಮ್ಮೆ ದೇವರಿಗೂ ಅಯ್ಯೋ ಅನ್ನಿಸುತ್ತೊ ಏನೊ. ನಾವು ನಗನಗತಾ ಇರಲಿ ಅಂತಾನೆ ಹೆಸರಿನ ಮತ್ತು ಅದಕ್ಕೆ ಸಂಬಂಧಪಟ್ಟ ಗೊಂದಲಗಳನ್ನ ಆ ಪರಮಾತ್ಮ ಸೃಷ್ಟಿಸಿದ್ದಾನೆ ಅಂತ ನನ್ನ ನಂಬಿಕೆ.

ಹೆಸರಿನಲ್ಲೇನಿದೆ. ಜಾಜಿನ ಕಾಕಡಾ ಅಂತ ಕರದ್ರೆ ಅದರ್ ಕಂಪು ಕಮ್ಮಿ ಯಾಗೋದಿಲ್ಲ ಅಂತ ಕವಿಗಳು ಮಹಾ ಕವಿಗಳು ಹೇಳಿದಾರೆ. ಭೂಲೋಕ ದಲ್ಲಿದ್ರೂನೂ, ಇನ್ಯಾವುದೊ ಲೋಕದಲ್ಲಿ ವಿಹರಿಸುತ್ತಿರುವ ಕವಿ, ಅವನ ಮರೆವಿನಲ್ಲಿ ಜಾಜಿ ಗಿಡದ ಮುಂದೆ ನಿಂತು, ಕಾಕಡಾ ಮಲ್ಲಿಗೆಯ ಮೇಲೆ ಕವನ ಕಟ್ಬಹುದು ನಿಜ, ಪ್ರಮಾದ್‌ವೇನ್ ಆಗಲ್ಲಾ. ಕೇವಲ ಆತನ ಪದ್ಯದಿಂದ ಜಾಜಿಯ ಕಂಪು ಕಮ್ಮಿಯಾಗತ್ಯೆ..?

ಆದರೆ ಕವಿಗಳ ಈ ಮಾತು ಹುಲುಮನುಜರಿಗೆ ಅನ್ವಯಿಸೋದಿಲ್ಲ. ಹಬ್ಬದ ಹಿಂದಿನ ದಿನ ಅಂಬೂರ್ ಮಲ್ಲಿಗೆ ಮಾರೋಳ್ ಹತ್ರ, ಕಾಕಡಾ ಹೂ ಮೊಳ ಹೇಗೆ ಅಂದ್ರೆ, "ಏನ್ರಮ್ಮ , ಕಣ್ಣ್ ಕಾಣಕಿಲ್ವಾ, ಚಿನ್ನಕ್ಕೂ ಬೆಳ್ಳಿಗೂ ನಿಮ್‌ಗೆ ಯತ್ವಾಸ ತಿಳೀದಾ" ಅಂತ ಎಲ್ಲರೆದುರಿಗೂ ಗದರಿಸಿಕೊಂಡಾಗ, ಹೂವಿನ ಕಂಪು ಹೋಗ ದಿದ್ರೂ, ನಂ ಮುಖ ಚಿಕ್ಕದಾಗುತ್ತೆ.

ಹೆಸರನೇಲ್ಲೇನಿದೆ ಎನ್ನುವುದಕ್ಕಿಂತ, ಹೆಸರಿನಲ್ಲೇ ಎಲ್ಲಾ ಇದೆ ಅಂದ್ರೂ ತಪ್ಪಾಗ್‌ಲಾರ್‌ದು, ಒಂದ್ ಹೆಸರನ್ನ ಕೇಳಿದ್ ತಕ್ಷಣ ಮನಸ್ಸ್‌ನಲ್ಲಿ ಒಂದ್ ಚಿತ್ರ ಮೂಡತ್ತೆ. ಆ ಹೆಸರಿನ ವ್ಯಕ್ತಿ ನಮ್ಮ ಊಹೆಗೆ ವ್ಯತಿರಿಕ್ತವಾಗಿ ಕಂಡಾಗ, ನಗು ಸಹಜವಾದ ಪ್ರತಿಕ್ರಿಯೆಯಾಗುತ್ತೆ.

ಮೊನ್ನೆ ನನ್ನ ಗೆಳತಿ ಶೀಲಾ ಫೋನ್ ಮಾಡಿದ್ಲು. ಶೀಲಾ ಅನಾಥ ಪೋಷಕ ಸಂಘದ ಕಾರ್ಯದರ್ಶಿನಿ. "ಮಕ್ಕಳಿಗೆ ಬಟ್ಟೆಗಳನ್ನ ಶೇಖರಿಸ್ತಾ ಇದೀವಿ, ನಿಮ್ಮನೇಲೇನಾದ್ರೂ ಇದ್ರೆ ಕೊಡಕ್ಕಾಗತ್ತಾ" ಅಂದ್ಲು. "ನೋಡ್ತಿನಮ್ಮ, ಅಟ್ಟದ್ ಮೇಲೆ ಹಳೇಬಟ್ಟೆ ಗಂಟ್‌ನಲ್ಲಿ ಏನಾದ್ರೂ ಇರ್‌ಬೋದು. ಆ ಕಡೆ ಬಂದಾಗ ತಂದ್‌ಕೊಡ್‌ತೀನಿ" ಎಂದೆ. "ನೀನ್ ಯಾವಾಗ್ ಬರ್ತಿಯೋ ಏನೋ, ನಮ

ವಾಲೆಂಟಿಯರ್ ವೆಂಕೂ ಇವತ್ತ್ ಮಧ್ಯಾನ್ನ ಆ ಕಡೆ ಬರೋದಿದೆ, ಬಂದಾಗ ಬಟ್ಟೆನ ಕೊಡು" ಅಂದ್ಲು. ಸರಿ ಎಂದೆ.

ಮಧ್ಯಾನ್ನವಾಯಿತು. ವೆಂಕೂ ಬರ್‍ತಾರೆ ಅಂತ ಅವರ ದಾರಿ ಕಾಯ್ತಾ ಕೂತೆ ಎರಡ್ ಘಂಟೆ ಹೊತ್ತಿಗೆ ಬಾಗಿಲ್ ಬೆಲ್ ಆಯಿತು. ಬಾಗಿಲ್ ತೆಗೀತೀನೀ, ಜೀನ್ಸ್, ಟೀ ಶರ್ಟ್ ತೊಟ್ಟು, ಚಿಕ್ಕ ಬಾಬ್ ಬಿಟ್ಟು, ಮೂರು ಇಂಚ್ ಹೀಲ್ ಮೇಲೆ ನಿಂತಿದ್ದಾಳೆ ಹದಿನೆಂಟರ ತರುಣಿ. "ಯಾರಮ್ಮಾ" ಅಂದೆ. "ನಾನ್ ವೆಂಕೂ, ಶೀಲಾ ಆಂಟಿ ಕಳಿಸಿದಾರೆ" ಅಂದ್ಲು. ಒಂದ್ ನಿಮಿಷ ಚಕ್ಕರ್ ಬಂದ್ ಹಾಗೆ ಆಯಿತು. ಈ ಜೀನ್ಸ್ ಧಾರಿಣಿನೇ ವೆಂಕೂ ? ಸಾಧ್ಯವೇ ಇಲ್ಲ ಅನ್ನಿಸ್ತು. "ನೀನೇ ಏನಮ್ಮ ವೆಂಕೂ" ಅಂತ ತಿರುಗಿ ಕೇಳಿದೆ, ನಗುತ್ತಾ "ಹೂಂ" ಎಂದ್ಲು ನನ್ನ ಮುಖದ ಮೇಲಿನ ಆಶ್ಚರ್ಯವನ್ನು ನೋಡಿ"ಅದು ನಂ granny's ನೇಮ್" ಅಂತ ಅಚ್ಚ ಬೆಂಗಳೂರು ಕನ್ನಡದಲ್ಲಿ ಅವಳೇ ಹೇಳಿದಳು.

ಈ ವೆಂಕಮ್ಮ ಕಥಾನ, ನಮ್ಮಕ್ಕನಿಗೆ ಹೇಳಿದಾಗ ಅಮೇರಿಕಾದಲ್ಲಿ ಅವಳಿಗೆ ಆದ ಅನುಭವಾನ ಹೇಳಿದ್ಲು. ನಮ್ಮಕ್ಕ ಅಲ್ಲಿಗೆ ಹೋಗಿದ್ದಾಗ, ಅಮೇರಿಕನ್ ಸ್ನೇಹಿತ ರೊಬ್ಬರ ಮನೆಗೆ ಊಟಕ್ಕೆ ಹೋಗಿದ್ದಳಂತೆ. ಆಕೆ "ನನ್ನ ಸ್ನೇಹಿತೆ Ann ಕೂಡ ಬರ್‍ತಾರೆ, ಆಕೆಯೂ ಇಂಡಿಯನ್" ಎಂದರಂತೆ, Ann ಬಂದಾಗ ನಮ್ಮಕ್ಕನ ಎದೆ ಬಡಿತ ಒಂದು ಕ್ಷಣ ನಿಂತಿತಂತೆ. ಕಾಸಗಲ ಕುಂಕುಮ ಇಟ್ಟ, ಪಟ್ಟೆ ಸೀರೆ ಉಟ್ಟ ಅನ್ನಪೂರ್ಣಮ್ಮ, ಅಮೇರಿಕದಲ್ಲಿ Ann ಆಗಿದ್ದರು !

ತಿಳಿನಗೆಯಿಂದ ಬಾಳನ್ನ ಹಗುರು ಮಾಡುವ ಕಾರ್ಯದಲ್ಲಿ ಅಡ್ಡ ಹೆಸರುಗಳ ಪಾತ್ರ ವಿಶಿಷ್ಟವಾದದ್ದು.

ಕೆಲವು ಅಡ್ಡಹೆಸರುಗಳನ್ನಂತೂ ಒಗಟುಗಳ ಸಾಲಿಗೆ ಸೇರಿಸಬಹುದು. ಈ ಅಡ್ಡಹೆಸರುಗಳ ಮೂಲಾನ್ ತಿಳಿಯೋದು ಬಲು ಕಷ್ಟ ಉದಾಹರಣೆಗೆ-ಕುನ್ನಿ, ಸಾಲ, ಹಾಸು, ಅಬ್ಬಿ, ಸದ್ದು, ಕಣ್ಣು ಇತ್ಯಾದಿ, ಇವುಗಳ ನಿಜರೂಪ ಏನಿರ್‌ಬಹುದು ಹೇಳಿ ನೋಡೋಣ, ಪರ್‌ವಾಗಿಲ್ಲ, ಉತ್ತರ ನಾನೇ ಹೇಳ್ತಿನಿ ಕೇಳಿ, ಸುಕನ್ಯ ಕುನ್ನಿ ಯಾಗಿದ್ದಾಳೆ, ಸುಹಾಸಿನಿಯ ಅಡ್ಡ ಹೆಸರು ಹಾಸು, ಅಭಿಮನ್ಯುವಿನ Short Form ಅಬ್ಬಿ, ಸಧ್ಯೋಜಾತನ ಸರಳ ರೂಪ ಸದ್ದು, ಕರ್ಣನೇ ಅವನ ತಂದೆ ತಾಯಿ ಗಳ ಕಣ್ಣು, ಸಾಲ ಎನ್ನುವುನರ ಒರಿಜಿನಲ್ಲು ವಿಶಾಲ ಗುಜರಾತಿನಲ್ಲಿದ್ದ ಅವಳನ್ನು ಮನೆಯಲ್ಲಿ ಶಾಲ ಅಂತ್ ಕರೀತಿದ್ದರಂತೆ, ಆ ಪ್ರಾಂತ್ಯದವರು ಅದನ್ನು ಸರಳವಾಗಿ ಸಾಲ ಅನ್ನುತ್ತಿದ್ರು ಅಷ್ಟೆ !

ಈ ಹೆಸರುಗಳ ರೂಪ ಪರಿವರ್ತನೆಯೂ ಒಂದು ಕಲೆ ಅನ್ನಿಸುತ್ತೆ ನಂಗೆ ನಮ್ಮ ಸ್ನೇಹಿತರ ಅನೇಕರ ಮಕ್ಕಳಿಗೆ, ಹಿರಿಯರ ಬಲವಂತಕ್ಕೆ ಏನೋ ಪೂರ್ವ ಕಾಲದ ಹೆಸರುಗಳನ್ನು ಇಟ್ಟಿದ್ದಾರೆ, ಆದ್ರೆ ಮೂಲದ ರೂಪಾಂತರ ನವ್ಯವಾಗೇ ಕಾಣುತ್ತೆ, ಪುಟ್ಟಮ್ಮ Patty ಆಗಿದ್ದಾಳೆ, ರುಕ್ಮಿಣಿ– Minnie, ಸುಶೀಲ Suzy, ಬಟ್ಟಮ್ಮ betty ಇತ್ಯಾದಿಯಾಗಿ ರೂಪಗೊಂಡಿದ್ದಾರೆ.

ಹೊದ್‌ವಾರ ನಂ ನೆಂಟರ್ ಮನೆಗೆ ಆರತಕ್ಷತೆಗೆ ಹೋಗಿದ್ದೆ. ಮಧ್ಯವಯಸ್ಸಿನ ಹೆಂಗಸೊಬ್ಬ್ರು ಅದು ಇದೂ ಮಾತಾಡ್ತಾ, "ನಂ ಶೀನಿ ಬೊಂಬಾಯಲ್ಲಿ ಲೇಡೀಸ್ ಹಾಸ್ಟೆಲಿನಲ್ಲಿ ಇರೋದು, ಮುಂದಿನ್ ತಿಂಗಳು ಬಂದ್‌ರೂ ಬರ್‌ಬಹುದು ಅಂದಾಗ ನನ್‌ಗ್ ಆಶ್ಚರ್ಯವಾಯ್ತು. ಇದೇನು ಕಾಲ ಇಷ್ಟು ಬದಲಾವಣೆ ಆಯ್ತು ಅನ್ನಿಸ್ತು. 'ಸೀನಿ' ಎಂದ್ರೆ ಶ್ರೀನಿವಾಸ ಇರ್‌ಬೇಕು. ಲೇಡಿಸ್ ಹಾಸ್ಟಲಿನಲ್ಲಿ ಏಕಿದಾನೆ ಭೂಪ ಅಂತ ಅರ್ಥವಾಗಲಿಲ್ಲ. ನಂತರ ಗೊತ್ತಾಯ್ತು ಸೀನಿಯ ಮೂಲ ನಾಮ 'ಸುಕೇಶಿನಿ' ಅಂತ !

ಹೆಸರಿನಲ್ಲೇನಿದೆ, ಬರೀ ಅಕ್ಷರಗಳ ಸಂಕಲನ ಅನ್ನೋದು ಶುದ್ಧ ತಪ್ಪು. ಮನುಷ್ಯರಂತೆ ಹೆಸರುಗಳಿಗೂ ವ್ಯಕ್ತಿತ್ವ, ವಯಸ್ಸೂ ಎಲ್ಲಾ ಇರುತ್ತೆ "ಗೌರಮ್ಮನ ಹಾಗೆ" ಅಂದ್ರೆ ತಕ್ಷಣ ಅಂಚಿನ ಸೀರೆ, ಪಿಣ್ಣಂತ ಹಾಕಿದ ಹೆರಳು, ಅರಿಶಿಣ ಹಚ್ಚಿದ ಕೆನ್ನೆ, ಬಲಭುಜದ ಮೇಲೂ ಸೆರಗು ಹೊದೆದ ಮಧ್ಯವಯಸ್ಸಿನ ಹೆಂಗಸಿನ ಚಿತ್ರ ಕಣ್ಣಿಗೆ ಕಟ್ಟುತ್ತೆ. ನಾರಾಯಣ ಶಾಸ್ತ್ರಿಗಳು ಎಂದರೆ ಜುಟ್ಟು ಬಿಟ್ಟ ಪಂಚೆಯುಟ್ಟ ಹಿರಿಯರ ಜ್ಞಾಪಕ ಬರುತ್ತೆ ಅದೇ tight pantu bunyan ಧರಿಸಿ, ಕತ್ತು ಕೈಗೆ ಚೈನು ಬಳೆ ಹಾಕಿಕೊಂಡು, ಉದ್ದ ಕ್ರಾಪಿನ ಮರಿ ಸಿನಿಮಾ ಸ್ಟಾರನ್ನ ಹೆಸರೇನಪ್ಪ' ಅಂದಾಗ, ಅವನು ಶ್ರೀನಿವಾಸ ಭಟ್ಟ ! ಅಂದ್ರೆ, ಕಿವೀನ ನಂಬೋದು ಕಷ್ಟವಾಗುತ್ತಲ್ವೆ ? ಕೆಲವು ಹೆಸರುಗಳು ವಯಸ್ಸನ್ನೂ ಸೂಚಿಸುತ್ತವೆ. ನನ್ನ ಗೆಳತಿಯೊಬ್ಬಳ ಹೆಸರು ಮಾಲಾ, ಅವಳ ಮಗಳ ಹೆಸರು ನಾಗರತ್ನ ಅಂತ. Share ಉ ಅಥವಾ company deposits ಗಳಿಗೆ ಸಂಬಂಧ ಪಟ್ಟ ಪತ್ರಗಳು ಬಂದಾಗ ಮಾಲಾ Miss ಆಗಿರುತ್ತಾಳೆ. ಹದಿನಾಲ್ಕು ವರ್ಷದ ನಾಗರತ್ನ Mrs. ಆಗಿರುತ್ತಾಳಂತೆ.

ನಂ ಸೋದರತ್ತೆ ಮಗಳು ರಶ್ಮಿಗೆ ಮದುವೆಯಾದ ಹೊಸತು. ದಂಪತಿಗಳು ನೆಂಟರಿಷ್ಟರ ಮನೆಗೆ ಭೇಟಿ ಕೊಡುತ್ತಿದ್ದರಂತೆ. ಉತ್ತರ ದೇಶದಲ್ಲಿ ಹುಟ್ಟಿ ಬೆಳೆದ ರಶ್ಮಿಗೆ, ಇಲ್ಲಿಯ ಎಷ್ಟೋ ಪದ್ಧತಿಗಳು ಹೊಸದಾಗಿ ಕಾಣುತ್ತಿದ್ದವು. ನೆಂಟರೊಬ್ಬರ ಮನೆಗೆ ಹೋದಾಗ, ಅಲ್ಲಿದ್ದ ಹಿರಿಯಾಕೆಯೊಬ್ಬರು ವಿಶ್ವಾಸದಿಂದ

ಮಾತಾಡಿಸಿ, "ರಶ್ಮಿ ಸಣ್ಣ ಮಗುಗೆ ನಮಸ್ಕಾರ ಮಾಡಮ್ಮ" ಎಂದರಂತೆ. ಸಣ್ಣ ಮಕ್ಕಳಿಗೂ ನಮಸ್ಕರಿಸುವ ಪದ್ಧತಿ ರಶ್ಮಿಗೆ ವಿಚಿತ್ರವಾಗಿ ಕಂಡಿತಲ್ಲದೆ, 'ಏನಪ್ಪ ಮಗೂ ಕೈಗೆ ಏನ್ ಕೊಡೋದು, ಬರಿಗೈಯಲ್ಲಿ ಬಂದೆನಲ್ಲಾ' ಅಂತ ಯೋಚಿಸು ತ್ತಿರುವಾಗ ಎಪ್ಪತ್ತು ದಾಟಿದ 'ಸಣ್ಣಮಗು' ಕೋಲೂರಿಕೊಂಡು ಆಚೆ ಬಂದರಂತೆ

ಲಿಂಗ ಬೇಧವಿಲ್ಲದ ಅಡ್ಡ ಹೆಸರುಗಳಿಂದ ಆಗುವ ಅನಾಹುತಗಳು ಅನೇಕ. ಸ್ನೇಹಿತರೊಬ್ಬರ ಮನೆಯಲ್ಲಿ ಮಕ್ಕಳಿಗೆ, ರವಿ, ಲತಾ, ಆಶಾ ಇತ್ಯಾದಿಯಾಗಿ ಚಿಕ್ಕ ಹೆಸರುಗಳನ್ನೆ ಇಟ್ಟಿದ್ದಾರೆ, ಆದರೆ ಮಕ್ಕಳನ್ನ ಟಿನ್ನಿ, ಟಿಕ್ಕೂ ಚಿಕ್ಕೂ, ಪಿಕ್ಕೂ ಅಂತ ಅಡ್ಡ ಹೆಸರುಗಳಿಂದ್‌ಲೇ ಕರೆಯೋದು, ನನಗೆ ಮರವು ಜಾಸ್ತಿ. ಜೊತೆಗೆ ಟಿನ್ನಿ ಹುಡುಗನೊ ಅಥವ ಚಿಕ್ಕೂ ಹುಡುಗಿಯೊ ಅಂತ ಅನುಮಾನ ಬೇರೆ. ಅವರ ಮನೆಗೆ ಹೋದಾಗ, ಬಾಗಿಲಲ್ಲಿ ನನ್ನನ್ನು ಸ್ವಾಗತಿಸಿದ ಹುಡುಗೀನ, ಕಷ್ಟ ಪಟ್ಟು ಯೋಚಿಸಿ, 'ಹಲೊ ಪಿಕ್ಕೂ' ಎಂದೆ. ನಂತರ ತಿಳೀತು ನನ್ನ ತಪ್ಪು ಪಿಕ್ಕೂ ಅವರ ಮನೆಯ ನಾಯಿಯ ಹೆಸರಂತೆ !

ನಮ್ಮನ್ನು ವಂಚಿಸುವ ಕಾರ್ಯದಲ್ಲಿ, ಮನುಷ್ಯರ ಹೆಸರಿನೊಂದಿಗೆ, ಸಂಸ್ಥೆಗಳ ಹೆಸರೂ ಸಾಕಷ್ಟು ಗೊಂದಲವನ್ನ ಉಂಟುಮಾಡತ್ವೆ.

ನಂ ದೊಡ್ಡಪ್ಪನ ಮಗಳಿಗೆ ವರಾನ್ವೇಶಣೆ ಮಾಡುತ್ತಿದ್ದಾಗ, ಒಬ್ಬ ಹುಡುಗ MIT ಇಂದ ಪಾಸು ಮಾಡಿದಾನೆ, ಅಂತ ಯಾರೋ ಹೇಳಿದರಂತೆ. ಉತ್ಸಾಹ ದಿಂದ ದೊಡ್ಡಪ್ಪ ಅವರ ಮನೆಗೆ ಹೋಗಿ ವಿಚಾರಿಸಿದಾಗ MIT., ಮೊಂಡನಹಳ್ಳಿ Institute of Technology ಯ ಸಂಕೇತಾಕ್ಷರ ಅಂತ ತಿಳೀತಂತೆ !

Imported ಮಾಲುಗಳಿಗೆ ಬಾಯಿಬಿಡುವ ನಮ್ಮ ಭಾರತಿಯರಿಗೆ, ಬೊಂಬಾ ಯಲ್ಲಿ 'Made in USA' ಎಂದು ಹಾಕಿದ ನಾನಾ ತರಹದ ಸಾಮಾನುಗಳು ದೊರೆಕುತ್ತೆ. USA, Ullahas Nagar Sindhi Association ನಿನ ಸಂಕೇತಾ ಕ್ಷರ ಅಷ್ಟೆ !

ಹೆಸರಿನಲ್ಲೇನಿದೆ, ಏನಿಲ್ಲಾ ಅನ್ನೋದು ಸ್ಪಷ್ಟವಾಯಿತಲ್ಲಾ !

ನಾಮಧೇಯಗಳಿಗೆ ನಾನಾ ತರಹವಾಗಿ ಧೋಕ ಕೊಡುವ ಸ್ವಭಾವದ ಜೊತೆಗೆ, ಪರಿಸ್ಥಿತಿಯನ್ನು ಎಡವಟ್ಟು ಮಾಡುವ ಚಾಳಿಯೂ ಇದೆ ಅನ್ನೋದು ಬೊಂಬಾಯಲ್ಲಿದ್ದಾಗ ನನಗೆ ಅರಿವಾಯ್ತು.

19

ನಮಗೆ ಬೊಂಬಾಯಿಗೆ ವರ್ಗವಾದಾಗ ಅಲ್ಲಿ ವಸತಿ ಸಿಕ್ಕ ಬಿಲ್ಡಿಂಗ್ ಇಪ್ಪತ್ತು ನಾಲ್ಕು Flatu ಗಳಿದ್ದವು. ಮನೆ ಅಚ್ಚುಗಟ್ಟಾಗಿದ್ರೂ, ಅಡಿಗೆ ಮನೇಲಿ ಒರಳು ಇರ್‌ಲಿಲ್ಲ. ಒಂದ್ ವಾರದ ನಂತ್‌ರ ಪುಡಿಗಳೂ ಮುಗಿದವು. ಒರಳಿಲ್ಲದೆ ತೊಂದರೆಯಾಗಿತ್ತು. ಹೊಸ್‌ದಾಗಿ ಬಂದಿದ್ದ್‌ರಿಂದ ಬಿಲ್ಡಿಂಗ್‌ನಲ್ಲಿ ಯಾರ ಪರಿಚಯವೂ ಇರಲಿಲ್ಲ. ದಕ್ಷಿಣದಿಂದ ಬಂದವರು ಯಾರಾದ್‌ರೂ ಇದ್ರೆ ಒರಳು ಸಿಗ್‌ಬಹುದು ಅನ್ನಿಸ್ತು. ತಕ್ಷಣ ಬಿಲ್ಡಿಂಗ್ ಬಾಗಿಲಲ್ಲಿ ತೂಗಹಾಕ್ಕಿದ್ದ ಹೆಸರುಗಳ ಬೋರ್ಡ್‌ನ್ನು ಓದಲು ಹೋದೆ. Mehta, Malhotra, Desai Shiradkal ಗಳ ಮಧ್ಯೆ ಒಂದು ಸುಬ್ರಮಣ್ಯಂಊ ಕಾಣಿಸಿತು. Flat ನಂಬರ್ ನೋಡಿಕೊಂಡು, ಶ್ರೀಮತಿ ಸುಬ್ರಮಣ್ಯಂ ಪರಿಚಯ ಮಾಡಿಕೊಳ್ಳಲು ಹೋದೆ, ಬೆಲ್ ಬಾರಿಸಿದಾಗ ಆಳೋಬ್ಬ ಬಾಗಿಲು ತೆಗೆದು, 'ಪೆರಿಯಮ್ಮ ಮದ್ರಾಸಿಗೆ ಹೋಗಿದ್ದಾರೆ, ಚಿನ್ನಮ್ಮ ಸ್ನಾನ ಮಾಡ್ತಿದಾರೆ, ಕೂತ್‌ಕೋಳಿ' ಅಂತ ತಮಿಳಿನಲ್ಲಿ ಹೇಳಿದ. ಎರಡು ನಿಮಿಷಗಳ ನಂತರ ಒಳಗಿನಿಂದ ಬಂದರು. ಮಿಸೆಸ್ ಸುಬ್ರಮಣ್ಯಂ. ತಿರುಗೀ ಶಾಕು, ಚಕ್ಕರು ನನಗೆ. ನಾನು ಇದಿರು ನೋಡುತ್ತಿದ್ದ ತಮಿಳ್‌ನಾಡು Co-optex ಜಾಹಿರಾತಿನ ತರುಣಿಯ ಬದಲು ಆರ್ ಅಡಿ ಎತ್ತರದ, ಕೆಂಚು, ಕೂದಲಿನ, ನೀಲಿ ಕಣ್ಣಿನ ಅಮೇರಿಕನ್ ಯುವತಿ 'Hai' ಎಂದಳು. ನಾನೂ ಸುಸ್ತಾಗಿ 'ಹಾಯ್' ಎಂದು ನಿಟ್ಟುಸಿರುಬಿಟ್ಟೆ: I'm Barbara Subramanyam' ಎಂದ್ಳು. ನಾನು ನನ್ನ ಪರಿಚಯ ಮಾಡಿಕೊಟ್ಟೆ. ಬಾರ್‌ಬರಳ ಹತ್ತಿರ ಒರಳು ಬನಕೆ ಕೇಳೋದು ಅಸಂಬದ್ಧ ಅನ್ನಿಸ್ತು. ಶಾಕ್ ಕಮ್ಮಿಯಾದ್ ಮೇಲೆ ಮನೆಗೆ ಹಿಂತಿರುಗಿದೆ. ಕಲಿತ ಪಾಠ-ಭಟ್ಟರ ಹೆಂಡತಿಯ ಹೆಸರು Zeenath ಆಗಿರಬಹುದು, ಅಥವ ಅಚ್ಚಮ್ಮನ ಗಂಡ Philips ಆಗಿರಬಹುದು ಅಲ್ವೆ !

ಚುನಾವಣಾ ಚುಟುಕಗಳು

—ಬಿ. ಎಸ್. ಚಂದ್ರಶೇಖರ್

ನಮ್ಮಕ್ಕನ ಮಗಳು ಸರಳಾ, ತಾನು ಬಹಳ ಸೀರಿಯಸ್ ಎಂದು ತಾನೇ ಹೇಳಿಕೊಳ್ಳುವ ಹುಡುಗಿ. ಅವಳು ನಗುವುದನ್ನು ಯಾರೂ ನೋಡಿಲ್ಲ. ಅವಳು ಮೊದ್ದುಮಣಿ ನೋಡಿ ಮುಖ ಗಂಟು ಹಾಕಿ ಕೊಳ್ಳುತ್ತಾಳೆ. ಮಲ್ಹಾರಿರಾಯರ ಕತೆಯನ್ನು ಓದುವಾಗ ಗರುಡ ಪುರಾಣ ಓದುತ್ತಿರುವವಳಂತೆ ಕಾಣುತ್ತಾಳೆ. ಮುಸುರಿ ಕೃಷ್ಣಮೂರ್ತಿ ಸಿನಿಮಾ ನೋಡುವಾಗಲೂ ಕರವಸ್ತ್ರದಿಂದ ಕಣ್ಣು ಒರಸಿಕೊಳ್ಳುತ್ತಿರುತ್ತಾಳೆ.

ಅವಳೇನಾದರೂ ಹಿಂದಿನ ಕಾಲದಲ್ಲಿ ರಾಜಕುಮಾರಿಯಾಗಿ ಹುಟ್ಟಿದ್ದಿದ್ದರೆ, ಅವಳಿಗೆ ಸಕ್ಕರೆ ಮಾತ್ರ ವಾಸಿಯಾಗುವಂತಹ ರೋಗ ಏನಾದರೂ ಬಂದು ಗಿಂದಿದ್ದರೆ, ಅವಳಪ್ಪ ರಾಜ. 'ನನ್ನ ಮಗಳನ್ನು ನಗಿಸಿದವರಿಗೆ ಅರ್ಧ ರಾಜ್ಯ, ಪೂರ್ತಿ ಮಗಳು ಕೊಡುತ್ತೇನೆ' ಎಂದು ಡಂಗೂರ ಹೊಡೆಸಬೇಕಾಗುತ್ತಿತ್ತು.

ಅಂತಹ ಸರಳಾ ಮೊನ್ನೆ ಚುನಾವಣೆ ಫಲಿತಾಂಶ ಪ್ರಕಟವಾದ ಮೇಲೆ ಹಳೆ ಪತ್ರಿಕೆಗಳನ್ನು ಓದುತ್ತಾ ಬಿದ್ದು ಬಿದ್ದು ನಗುತ್ತಿದ್ದಳು. ಆಶ್ಚರ್ಯದಿಂದ ಹತ್ತಿರ ಹೋದಾಗ ಹೇಳಿದಳು "ನೋಡೋ ಎಂತಾ ಹಾಸ್ಯ ಈ ಪೇಪರ್‌ನಲ್ಲಿ ಬರೀ ಹೆಡ್ ಲೈನ್ಸ್ ನೋಡು ಹೇಗೆ ತಮಾಷೆಯಾಗಿದೆ 'ಅಮಿತಾಬ್ ಗೆಲ್ಲುವುದು ದುಸ್ತರ' 'ವಾಜಪೇಯಿ ವಿಜಯ ಕಟ್ಟಿಟ್ಟ ಬುತ್ತಿ'. 'ಕಾಂಗ್ರೆಸ್‌ಗೆ 225 ಸೀಟ್ ಸಿಕ್ಕಿದರೆ ಹೆಚ್ಚು' 'ಯು ಪಿ ಯಲ್ಲಿ ಸಂಜಯ್ ಮಂಚ್‌ಗೆ 15 ಸ್ಥಾನ ಖಂಡಿತಾ' ನೋಡೋ ಎಷ್ಟು ಕಷ್ಟ ಪಟ್ಟು ವಿಷಯ ಸಂಗ್ರಹಿಸಿದಾರೆ ಪೇಪರ್‌ನವರು. ಎಂತೆಂತ ಲೆಕ್ಕ ಮಾಡಿರಾರೆ. ಯಾವ ಯಾವ ಜಾತಿ ಹೇಗೆ ಹೇಗೆ ವೋಟು ಮಾಡುತ್ತ ಅಂತಹ ವಿದ್ವತ್ ಪೂರ್ಣ ವಿಶ್ಲೇಷಣೆ ನೋಡು. ಇಂತಹ ತಮಾಷೆ ಇನ್ನು ಯಾವಾಗಲಾದರೂ ನೋಡಿದೀಯಾ" ಎಂದಳು.

ಅವಳು ಕೊಟ್ಟ ಹಳೆ ಪೇಪರ್ ಮತ್ತೆ ತಿರುವಿ ಹಾಕಿದ ಹಾಕಿದ ಹಾಗೆ ನಾನೂ ಗೊಳ್ಳೆಂದು ನಗಲೇಬೇಕಾಯಿತು. ಅಂದ ಹಾಗೆ ಹಾಸ್ಯಾಂಕ ಎಂದು ಒಂದು ಚೂರು ನಗು ಬರದಂತಹ ವಿಶೇಷ ಸಂಚಿಕೆಗಳನ್ನು ಪ್ರಕಟಿಸುವ ಪತ್ರಿಕೆಗಳು, ಚುನಾವಣಾ ವಿಶೇಷಗಳನ್ನು ಫಲಿತಾಂಶ ಬಂದ ಒಂದು ವಾರದ ಮೇಲೆ ಬಿಡುಗಡೆ ಮಾಡಿದರೆ ಅದಕ್ಕಿಂತ ಹಾಸ್ಯಬೇಕೇ?

ತಂಗವೇಲುವಿಗೆ ಓದು ಬರಹ ಬರುವುದಿಲ್ಲ. ಆದರೆ ಅವನ ಹೆಸರು ಮತದಾರರ ಪಟ್ಟಿಯಲ್ಲಿದೆ. ಮೊನ್ನೆ ಚುನಾವಣೆಯಲ್ಲಿ ಅವನ ಕ್ಷೇತ್ರದಲ್ಲಿ ಅರುಳಪ್ಪ–ಇರುಳಪ್ಪ ಮುಖ್ಯ ಸ್ಪರ್ಧಿಗಳು. ತಂಗವೇಲು ವೋಟು ಕೇಳಿ ಅರುಳಪ್ಪ 20 ರೂ. ಕೊಟ್ಟ. ಇರುಳಪ್ಪ 10 ರೂ. ಕೊಟ್ಟ. ಇಬ್ಬರಿಂದಲೂ ಹಣ ಪಡೆದ ತಂಗವೇಲು ಇರುಳಪ್ಪನಿಗೆ ತನ್ನ ಮತ ಕೊಟ್ಟ. ಇವನು ಇನ್ನೊಬ್ಬನಿಗಿಂತ ಕಡಿಮೆ ಲಂಚಕೋರ ಎನ್ನುವುದು ತಂಗವೇಲು ಕೊಟ್ಟ ಸಮಾಧಾನ.

o o o o o

ಆನಂದ ರಾಯರಿಗೆ ಕೊರಗಲು ಕಾರಣಗಳು ಬೇಕೇ ? ನೂರಾರು ಪೆನ್‌ಷನ್ ತರಲು ಬ್ಯಾಂಕಿಗೆ ಹೋದರೆ ಅಲ್ಲಿರುವ ನೌಕರ–ನೌಕರಾಣಿಯರು ಚಕ್ಕಂದ ಆಡುತ್ತಿರುತ್ತಾರೆ. ಅವರೇಕಾಯಿಯಲ್ಲಿ ಸೊಗಡಿಲ್ಲ. ಬೆಲೆ ಜಾಸ್ತಿ. ಹಳೆ ಪೇಪರ್ ಕೊಳ್ಳುವವನು ತೂಕದಲ್ಲಿ ಮೋಸ ಮಾಡುತ್ತಾನೆ. ಸ್ನಾನಕ್ಕೆ ನೀರು ಕಾಯಿಸುವ ಸಮಯಕ್ಕೆ ಕರೆಂಟ್ ಕಟ್ ಮಾಡುತ್ತಾರೆ. ಡೈರಿ ಹಾಲು ವಾಸನೆ. ಸಿಟಿ ಬಸ್ ಕಂಡಕ್ಟರ್ ಟಿಕೆಟ್‌ಗೆ ಎಂಜಲು ಹಚ್ಚುತ್ತಾನೆ.

ಆನಂದ ರಾಯರ ನಿತ್ಯದ ಅಳು ತಾರಕಕ್ಕೇ ಏರುವುದು ಚುನಾವಣೆ ಸಮಯದಲ್ಲಿ. ನಮ್ಮನೆ ಗೋಡೆ ಮೇಲೆ ಪೋಸ್ಟರ್ ಅಂಟಿಸಿದಾರೆ. ನಿದ್ದೆ ಮಾಡುಕ್ಕೆ ಬಿಡದ ಹಾಗೆ ಮೈಕ್ ಕಿರುಚುತ್ತವೆ ಎಂದು ಮುಂತಾಗಿ ತಿಂಗಳು ಪೂರ್ತಿ ಕೊರಗುಟ್ಟುತ್ತಾರೆ.

ಆದರೆ ಅವರಿಗೂ ಸಂತೋಷ ತರುವ ದಿನ ಒಂದಿದೆ. ಅದೇ ಚುನಾವಣೆ ಫಲಿತಾಂಶ ಪ್ರಕಟಣೆಯ ದಿನ. ಆ ರಾತ್ರಿ ಪೂರ್ತಿ ಎದ್ದಿರುತ್ತಾರೆ. ಸೋತವರ ಹೆಸರುಗಳು ಬಂದ ಹಾಗೆ ಇವರಿಗೆ ಖುಷಿ ಹೆಚ್ಚಾಗುತ್ತಾ ಹೋಗುತ್ತದೆ. ' ಅವನೂ ಬಿದ್ದನೆ ಸರಿಯಾದ ಶಾಸ್ತಿಯಾಯಿತು. ಅವನಿಗೆ ಡಿಪಾಸಿಟ್ ಹೋಯ್ತು. ಬಹಳ ಒಳ್ಳೆಯದೇ ಆಯ್ತು. ಇವನೂ ಪಾರ್ಲಿಮೆಂಟ್ ಹೋಗಬೇಕಾಗಿರ್‍ತ್ತಂತೆ ಮೂರ್ಖ ' ಎಂದು ಮುಂತಾಗಿ ಟೀಕೆ ಮಾಡುತ್ತಾ ಸುಖಿಸುತ್ತಾರೆ. ಅಪರೂಪಕ್ಕೊಮ್ಮೆ ' ಅವಶ್ಯವಾದ ಅವನಿಗೆ ಹಾಗೆ ಆಗಬಾರದಾಗಿತ್ತು ' ಎಂದರೂ ಒಟ್ಟಿನಲ್ಲಿ ಅವರಿಗೆ ತುಂಬಾ ಸಂತೋಷ ತರುವ ದಿನ ಅದು. ಚುನಾವಣೆಯಲ್ಲಿ ಒಬ್ಬ ಗೆಲ್ಲಲೇಬೇಕು, ಅದು ನಮ್ಮ ಪ್ರಾರಬ್ಧ. ಆದರೆ ಇಷ್ಟೊಂದು ಜನ ಸೋಲುತಾರಲ್ಲ ಅದು ನಮ್ಮ ಪುಣ್ಯ ಎನ್ನುತ್ತಾರೆ ಆನಂದರಾಯರು. O

ಪಟ್ಟಣದ ಪಾರ್ವತಿ

—ವ್ಯ.ರಿ.

"ಈ ಮಾಡ್ ಕಾಲೇಜ್ ಹುಡುಗರು ಬರೀ ಥಳುಕಿನ ಬೊಂಬೆಗಳು. ಜೀನ್ಸ್. ಬಳೆ ಹಾಕ್ಕೊಂಡು ಹುಡುಗೀರ್ ಮುಂದೆ ಮೆರೆದಾಡುಕ್ಕೆ ಮಾತ್ರ ಲಾಯಕ್ಕು" ಅಂತ ಪಾರ್ವತೀದು ಒಂದೇ ರಾಗ. ಪಾರ್ವತಿ ಎಂ.ಕಾಂ., ನ ಫಸ್ಟ್ ರ್ಯಾಂಕ್‌ನಲ್ಲಿ ಪ್ಯಾಸ್ ಮಾಡಿದ ಮೇಲೆ, ಅವಳ ಅಪ್ಪ ಅಮ್ಮಂದಿರಿಗೆ ಸಹಜವಾಗಿ ಮಗಳಿಗೆ ತಾಳೀ ಕಟ್ಟಿಸಿ ಬಿಡಬೇಕೆಂಬ ಹಂಬಲ. ಪಾರ್ವತಿ ಮಾತ್ರ ಪಟ್ಟಣದ ಜೀವನದ ಕೃತಕ ಮೌಲ್ಯ ಗಳನ್ನು ಹೊಂದಿರೋ ಹುಡುಗರನ್ನಂತೂ ನಾನು ಮದುವೆಯಾಗುಲ್ಲ ಅಂತ ಖಡಾ ಖಂಡಿತವಾಗಿ ತಿಳಿಸಿ ಬಿಟ್ಟಿದ್ದಳು.

"ಇನ್ನೆಂಥ ಹುಡುಗನ್ನ ಮದುವೆಯಾಗ್ತೀಯಮ್ಮ ?" ತಂದೆಯ ಕಳಕಳಿಯ ಪ್ರಶ್ನೆ.

"ನೋಡಪ್ಪ, ನಾನು ಮದುವೆಯಾಗಬೇಕೂ ಅಂದ್ರೆ, ಯಾವುದಾದರೂ ವಿದ್ಯಾವಂತನಾದ, ಗಂಭೀರವಾಗಿರುವ ಹಳ್ಳೀ ತರುಣನ್ನ ಮಾತ್ರ. ಒಳ್ಳೇ ಕುಟುಂಬ ದವನಾಗಿದ್ದು, ತಾನೇ ಸ್ವತಃ ಹಳ್ಳೀ ನೆಲದಲ್ಲಿ ನಿಂತು ಕಲಿತಿರೋ ವಿದ್ಯೇನ ಬೆಳೆ ಉತ್ತಮ ಪಡಿಸೋಕೆ ಬಳಸ್ತಿರೋ ಅಂಥ ಮಣ್ಣಿನ ಮಗ ಸಿಕ್ಕಿದರೆ ಮಾತ್ರ ಈ ವಿಷಯ ನಾನು ಯೋಚಿಸುಕ್ಕೆ ಸಿದ್ಧ" ಪಾರ್ವತಿಯ ಅಚಲ ನಿರ್ಧಾರ.

ಪಾರ್ವತಿ ಅಪ್ಪನೂ ನಾಕಾರು ಕಡೆ ಗಂಡು ಹುಡುಕುಕ್ಕೆ ಶುರು ಮಾಡಿದರು. ಕೊನೆಗೆ ಬಿಜಾಪುರ ಜಿಲ್ಲೆಯ ತಾಡುಗೋಡು ಗ್ರಾಮದ ಪಾಟೀಲರ ಮಗ ಸಂಗನ ಗೌಡ ಎಂಬ ವರನ ಜಾತಕ ಪ್ರಶಸ್ತವಾಗಿದೆ ಅಂತ ಜನೋರು ಹೇಳಿದ ಮೇಲೆ, ಹುಡುಗ ಹುಡುಗಿ ಒಪ್ಪಿ ಮದುವೆಯೂ ನಡೆದು ಹೋಯಿತು.

ಸಂಗನಗೌಡ ಎತ್ತರದ ನಿಲುವಿನ ವ್ಯಕ್ತಿ. ಬಲು ಗಂಭೀರ ಸ್ವಭಾವ. ಮಾತು ಬಲು ಕಡಿಮೆ. ತಾಡುಗೋಡು ಗ್ರಾಮದಲ್ಲಿ ನೂರಾರು ಎಕರೆ ಭೂಮಿಗೆ ಮಾಲಿಕ ನಾಗಿದ್ದರೂ, ತಾನೇ ಸ್ವತಃ ನಿಂತು ಸಾಗುವಳಿ ಮಾಡಿಸುತ್ತಿದ್ದ. ತಾಡುಗೋಡಿನಲ್ಲಿ ಅವರದೇ ದೊಡ್ಡ ಮನೆ. ರೈಲು, ಬಸ್ ಸಂಪರ್ಕವಿಲ್ಲದ ತಾಡಗೋಡಿನಂತಹ ಕುಗ್ರಾಮದಲ್ಲಿದ್ದು ನಿಷ್ಠೆಯಿಂದ ಸಾಗುವಳಿ ಮಾಡಿಸುತ್ತಿದ್ದ ಗಂಡನ ಬಗ್ಗೆ ಪಾರ್ವತಿಗೆ ಹೆಮ್ಮೆಯುಂಟಾಗಿತ್ತು.

ಮದುವೆಯಾದ ಮಾರನೆಯ ದಿನ. ತಾಡಗೋಡಿಗೆ ನವದಂಪತಿಗಳ ಪ್ರಯಾಣ ರೈಲಿನಲ್ಲಿ ಬಿಜಾಪುರ ಸೇರಿ, ಬಿಜಾಪುರದಿಂದ ಹಿಪ್ಪರ್ಗಿವರೆಗೂ ಬಸ್ಸಿನಲ್ಲಿ ಪ್ರಯಾಣ ಮಾಡಿ, ಅಲ್ಲಿಂದ ಆರು ಮೈಲು ಎತ್ತಿನ ಗಾಡಿ ಅಥವಾ ಕಾಲು ನಡಿಗೆ ದೂರ ತಾಡ ಗೋಡು ಗ್ರಾಮ. ಪಾರ್ವತಿ ಗಂಡನ ಜೊತೆ ಹಿಪ್ಪರ್ಗಿಯಲ್ಲಿ ಬಸ್‌ನಿಂದ ಇಳಿಯುತ್ತಲೇ ಕಾಣಿಸಿತು ಅಲಂಕರಿಸಿದ ಒಂಟೆತ್ತಿನ ಗಾಡಿ.

ಸಂಗನ ಗೌಡ, ಗಾಡಿ ಹೊಡೆಯುವವನನ್ನು ಇಳಿಸಿ, ಪಾರ್ವತಿಯನ್ನು ಗಾಡಿ ಯಲ್ಲಿ ಕೂರಿಸಿ, ತಾನೇ ತಾಡಗೋಡಿನತ್ತ ಗಾಡಿ ನಡೆಸಿದ. ಹಳ್ಳಿ ಗಾಡಿನ ದಾರಿ. ಗಾಡಿ ಕುಲುಕುತ್ತಾ ಹೊರಟಿತು.

ದಾರಿ ಸಾಗುತ್ತಿದ್ದಂತೆ, ಹಾದಿಯಲ್ಲಿನ ಕಲ್ಲೊಂದಕ್ಕೆ ಎತ್ತಿನ ಕಾಲು ತಾಕಿ ಎತ್ತು ಎಡವಿತು. ಸಂಗನ ಗೌಡ "ಒಂದು ಬಾರಿ" ಎಂದು ಹೇಳಿ ಗಾಡಿಯನ್ನು ಮುಂದೆ ನಡೆಸಿದ. ಸ್ವಲ್ಪ ದೂರ ಹೋದ ನಂತರ, ದಾರಿ ಬಹಳ ಕೆಟ್ಟಿದ್ದರಿಂದ ಎತ್ತು ಇನ್ನೊಮ್ಮೆ ಎಡವಿತು. ಸಂಗನ ಗೌಡ "ಎರಡು ಬಾರಿ" ಎಂದು ಹೇಳಿ ಸುಮ್ಮನಾದ. ಗಾಡಿ ಮುಂದೆ ಸಾಗಿತು, ಇನ್ನೊಂದು ನಾಲ್ಕು ಮಾರು ಹೋಗು ವಷ್ಟರಲ್ಲಿ ದಾರಿಯಲ್ಲಿದ್ದ ಹಳ್ಳವೊಂದರಲ್ಲಿ ಕಾಲಿಟ್ಟ ಎತ್ತು ಮತ್ತೊಮ್ಮೆ ಎಡವಿತು.

ಸಂಗನ ಗೌಡ ಮರು ಮಾತಿಲ್ಲದೇ, ಗಾಡಿಯಿಂದ ಇಳಿದು, ಕೈಲಿದ್ದ ಬಾರು ಕೋಲಿನಿಂದ ಎತ್ತನ್ನು ಹಿಂದೆ ಮುಂದೆ ನೋಡದೇ ಜೋರಾಗಿ ಥಳಿಸಲು ಶುರು ಮಾಡಿದ. ಪಾರ್ವತಿಗೆ, ತನ್ನ ಗಂಡ ಮೂಕ ಪ್ರಾಣಿಯನ್ನು ಹಿಂಸಿಸುವುದನ್ನು ನೋಡಿ, ಕೋಪದಿಂದ ಮಾತೇ ಹೊರಡದಂತಾಯಿತು. ಪಟ್ಟಣದಲ್ಲಿ ಪಾರ್ವತಿ ಪ್ರಾಣಿ ದಯಾ ಸಂಘದ ಕಾರ್ಯದರ್ಶಿಣಿ ಬೇರೇ, "ಏನ್ರೀ ಇದು! ನಾಚಿಕೆ ಯಾಗುಲ್ವೇ! ಮೂಕ ಪ್ರಾಣೀನ ಹೀಗೆ ಹೊಡೀತೀರಲ್ಲ. ಈ ಕ್ಷಣ ನಿಲ್ಲಿಸಿ ನಿಮ್ಮ ಈ ಒಡ್ದಾಟಾನಾ" ಪಾರ್ವತಿ ಕೋಪದಿಂದ ಕೂಗಿದಳು. ಸಂಗನ ಗೌಡ ನಿಧಾನ ವಾಗಿ ಪಾರ್ವತಿ ಕಡೆ ತಿರುಗಿ ಹೇಳಿದ

"ಒಂದು ಬಾರಿ"

ಪುರಾಣ ಪುರುಷರ ವಕೀಲಿ

ಡಾ॥ ಪರದ್ದಿ ಮಲ್ಲಿಕಾರ್ಜುನ

ಮೀಸೆ ಹೊತ್ತಿಹ (ಈಗ ಅದು ಇಲ್ಲದಿರುವ ಛಾನ್ಸ್ ಹೆಚ್ಚು) ಗಂಡಸರಲ್ಲಿ ಮಾತ್ರ ಈ ಬುದ್ಧಿವಂತಿಕೆಯಿದೆಯೆಂದು ತಿಳಿದುಕೊಳ್ಳುವುದು. ಇಂದಿರಾಗಾಂಧಿಯವರು (ಅವರ ಆತ್ಮಕ್ಕೆ ಶಾಂತಿಯಿರಲಿ) ನಮ್ಮ ವಿಶಾಲ ದೇಶವನ್ನು ಸಮಗ್ರ ಎರಡು ದಶಕಗಳಷ್ಟು ದೀರ್ಘ ಅವಧಿಯವರೆಗೆ ಆಳಿದುದನ್ನು ನೋಡಿಯೂ, ಮೂರ್ಖತೆಯ ಇನ್ನೊಂದು ಹೆಸರಾದೀತು. ಪ್ರಳಯಾಂತಕ ಬುದ್ಧಿಯುಳ್ಳ ಊರ್ವಶಿಯ ಚಾತುರ್ಯವನ್ನು ನೆನಪಿಗೆ ತಂದರೆ ಆ ಮೂರ್ಖತನದ ಆಳ ಇನ್ನೂ ಹೆಚ್ಚೆಂದು ತಿಳಿದೀತು. ಆ ಪ್ರಸಂಗ ಇಂತಿದೆ.

ಮಹಾಕವಿ ಕಾಳಿದಾಸನ (ಯಾವ ದೇಶದ ಕವಿಯೆಂದು ಕೇಳುವ ರಾಜದೂತರೂ ನಮ್ಮಲ್ಲಿಲ್ಲದೇ ಇಲ್ಲ) ನಾಟಕಗಳಲ್ಲೊಂದಾದ ವಿಕ್ರಮೋರ್ವಶೀಯದ ನಾಯಿಕೆ (ಕ್ಷಮಿಸಿ, ಕನ್ನಡ ಪತ್ರಕರ್ತರ ನಾಯಿಕೆಯಲ್ಲ) ಊರ್ವಶಿಯು, ಸರಸ್ವತೀ ವಿರಚಿತವಾದ ಮತ್ತು ಭರತಮುನಿ ನಿರ್ದೇಶಿತವಾದ 'ಲಕ್ಷ್ಮೀ ಸ್ವಯಂವರ'ವೆಂಬ ನಾಟಕದಲ್ಲಿ (ನಾಟಕದಲ್ಲೊಂದು ನಾಟಕವೆಂದು ಆಶ್ಚರ್ಯ ಪಡಬೇಕಾಗಿಲ್ಲ. ಏಕೆಂದರೆ ನಾವು ಜೀವನದಲ್ಲಿ ಪ್ರತಿನಿತ್ಯ ಎಷ್ಟು ನಾಟಕಗಳನ್ನಾಡುತ್ತೇವೆಯೆಂಬುದು ಗಣನೆಗೆ ಸಿಲುಕದ ವಿಷಯ) ಲಕ್ಷ್ಮೀ ಪಾತ್ರಧಾರಿಣಿಯಾಗಿರಲು, ಅವಳ ಸಖಿ "ಯಾರನ್ನು ನೀನು ಪ್ರೇಮಿಸುತ್ತೀ ?" ಎಂದು ಕೇಳಲಾಗಿ "ಪುರುಷೋತ್ತಮ" ಎನ್ನುವ ಬದಲಾಗಿ "ಪುರೂರವಸ್" ಎಂದು ನುಡಿದು ಆತ್ಮ ವಂಚನೆಯ ದೋಷದಿಂದ ದೂರವಾಗುತ್ತಾಳೆ. (ಅವಳಿಗೆ ನಟನೆ ಬರುವುದಿಲ್ಲವೆಂದು ನಮ್ಮಲ್ಲಿ ಅನೇಕರು ಕನಿಕರಿಸಬಹುದಾದರೂ ಅವಳ ಮರ್ಮವನ್ನು ಅರಿಯುವ ಶಕ್ತಿ ನಮ್ಮಲ್ಲಿಲ್ಲವೆಂದು ಹೇಳಬೇಕಾದೀತು) ಅರ್ಥಾತ್ ನಟಿಯಾಗಿ ಸೋತರೂ ಪ್ರಿಯತಮೆಯಾಗಿ ನಮ್ಮ ಮನಸ್ಸನ್ನು ಸೂರೆಗೈಯುತ್ತಾಳೆಂದು ವಿಮರ್ಶಿಸಬಹುದು.

ಭಾರತ ಮುನಿ ಸಹಜವಾಗಿಯೇ ಸಿಟ್ಟಿಗೇಳುತ್ತಾನೆ. ಹಾಗೇನಾದರೂ ಕೋಪಗೊಳ್ಳದಿದ್ದರೆ, ಮುನಿ ಪದವಿಗೇ ಅಪಚಾರವಾಗುತ್ತಿತ್ತು. (ಮುನಿ–ಮುನಿಯುವವ) ಮತ್ತು ನಿನಗೆ ಸ್ವಗದಲ್ಲಿ ಸ್ಥಳವಿಲ್ಲ ಎಂದು ಶಪಿಸುತ್ತಾನೆ. (ಆಗಲೇ ಸ್ವರ್ಗದಲ್ಲಿ ಸ್ಥಳಾಭಾವವಿದ್ದಿರಬೇಕು). ಆದರೆ 'ಭೂಮಿಗೆ ಹೋಗು' ಎಂಬುದು ಅವನ ಮಾತಿನ ಮರ್ಮವಲ್ಲ. (ಅನ್ಯಥಾ ಪ್ರಿಯತಮನ ಸಮಾಗಮ ಅಸಂಭವವಾಗಿರು

ವಾಗ ಶಾಪವೇ ವರವಾಗಿ ಪರಿಮಿಸಿದ್ದನ್ನಿಲ್ಲಿ ಕಾಣಬಹುದು. ರೋಗಿ ಬಯಸಿದ್ದು, ವೈದ್ಯ ಹೇಳಿದ್ದು ಹಾಲು ಹಣ್ಣು ಎಂಬುದರ ಪ್ರತ್ಯಕ್ಷ ನಿದರ್ಶನವಿದು) ಆದಷ್ಟು ಬೇಗ ಆತುರದಿಂದ ಸ್ವರ್ಗದಿಂದ ನಿರ್ಗಮಿಸಬೇಕೆಂದು ಊರ್ವಶಿಗೆ ಇಂದ್ರನು ಅನುಗ್ರಹ (ಅದೇ ಶಾಪವಾಗಿ, ಅದರ ತಾಪದಲ್ಲಿ ಬೇಯುವ ಊರ್ವಶಿಯನ್ನು ನೋಡುವನಾವಿದ್ದೇವೆ) ಮಾಡುತ್ತಾನೆ. ಇಂದ್ರನಿಗೆ ಅವಳ ಬಗ್ಗೆ ಸಹಾನುಭೂತಿಗಿಂತಲೂ (ಕಂಪ್ಯಾಷನ್) ಕಾಮವಾಸನೆಯೇ (ಪ್ಯಾಷನ್) ಹೆಚ್ಚಾಗಿರುವುದನ್ನು ಇದು ಎತ್ತಿ ತೋರಿಸಬಹುದು. ಇಂದ್ರನ ಮಾತು ಇಂತಿದೆ :— ಪುರೂರವನು ನಿನ್ನಲ್ಲಿ ಜನಿಸಿದ ಸಂತಾನವನ್ನು ಕಂಡಕೂಡಲೇ ಸ್ವರ್ಗಕ್ಕೆ ಮರಳು'. ಇಲ್ಲೂ ಇಂದ್ರನ ಆಶಯ ಸೂರ್ಯ ಪ್ರಕಾಶದಷ್ಟು ನಿಚ್ಚಳ.

ಆದರೆ ಪುರೂರವನ ಪೌರುಷಾತಿಶಯಕ್ಕೆ ಮತ್ತು ಮಧುರ ಮಾತಿಗೆ ಮಾರು ಹೋಗಿಯೋ ಅಥವಾ ಬದಲಾವಣೆಯನ್ನು ಬಯಸಿಯೋ, ಅವನಲ್ಲಿ ಅನುರಕ್ತಳಾದ ಮಾನಿನಿಯು, ಇಂದ್ರನ ಮಾತನ್ನು ಅಕ್ಷರಶಃ ಪಾಲಿಸುವ ನೆವದಿಂದ ಪತಿಗೆ ಗೊತ್ತಾಗದಂತೆ ಒಬ್ಬ ಗಂಡು ಮಗುವನ್ನು ಹೆತ್ತು (ಕೆಲಕಾಲವಾದರೂ ಹೊತ್ತಿರಬೇಕು) ವಿದ್ಯಾರ್ಜನೆಯ ನೆವದಲ್ಲಿ ಒಂದು ಋಷ್ಯಾಶ್ರಮದಲ್ಲಿ ಅಡಗಿಸಿಡುತ್ತಾಳೆ. ಋಷ್ಯಾಶ್ರಮಿಗಳು, ಅನಾಥಶ್ರಮಗಳೂ ಆಗಿದ್ದವೆಂಬುದಕ್ಕೆ ಉದಾಹರಣೆಗಳು ಹೇರಳವಾಗಿವೆ. ಆದ್ದರಿಂದ ಪುರೂರವನು ತನ್ನ ಮಗನ ಮುಖವನ್ನು ನೋಡುವ ಭಾಗ್ಯದಿಂದ ವಂಚಿಕನಾಗುತ್ತಾನೆ. (ಒಬ್ಬನ ಭಾಗ್ಯ, ಇನ್ನೊಬ್ಬನ(ಳ) ದುರ್ಭಾಗ್ಯವಲ್ಲವೇ ?) ಹಾಗಾಗಿ ತಾನು ತನ್ನ ಮೆಚ್ಚಿನ ಪುರುಷನಿಂದ ಅಗಲುವ ಭೀತಿಯಿಲ್ಲದೇ ಮಗನ ವಿಷಯವನ್ನು ಪೂರ್ತಿಯಾಗಿ ಮರೆತಿರುತ್ತಾಳೆ (ಕಿಟಿಕಿಯಿಂದ ಹೋದ ಭೂತ ಗವಾಕ್ಷಿಯಿಂದ ಬಂದಂತೆ ಅವಳ ಮಗನು ಬಂದೇ ಬರುತ್ತಾನೆಂಬ ವಿಷಯ ಅಷ್ಟು ಮಹತ್ವದ್ದಲ್ಲ). ಹೇಗಿದೆ ಊರ್ವಶಿಯ ವಕೀಲಿ ಬುದ್ಧಿ ! ಇಂದ್ರನ ಆಶಯ ಸರಳ—ಊರ್ವಶಿ ಪುರೂರವನಿಂದ ಗರ್ಭಿಣಿಯಾಗಿ ಪ್ರಸವವಾದ ಕೂಡಲೇ ಮರಳಿ ಮಣ್ಣಿಗೆ (ಊರ್ವಶಿಗೆ ಸ್ವರ್ಗವು ವಾಸ್ತವವಾಗಿ ಮಣ್ಣೇ !) ಬರಬೇಕೆಂಬುದೇ ಆಗಿದೆ. ಆದರೆ ಅವನ ಆಶಯದ ವಿರುದ್ಧವಾದ ವ್ಯಾಖ್ಯಾನವನ್ನು (ಆತ್ಮವಂಚನೆ ಮಾಡಿ, ಖ್ಯಾತನಾಮರಾದ ನ್ಯಾಯವಾದಿಗಳು ತಮ್ಮ ಮೀಸೆಯ ಬಗ್ಗೆ ಇದ್ದ (ಇದ್ದರೆ) ಅಭಿಮಾನವನ್ನು ಬಿಡುವಂತೆ) ಮಾಡಿದ್ದಾಳೆ. ಅವಳ ಮಾತೃತ್ವದ ವಿಷಯವಾಗಿ ವಿಮರ್ಶಕರು ನಾಯಿ ಬೆಕ್ಕುಗಳಂತೆ ಕಚ್ಚಾಡುವುದು ಅಪ್ರಸ್ತುತ.

ಇಂದ್ರನು ಊರ್ವಶಿಗೆ ಅನುಗ್ರಹಿಸುವ ಪೂರ್ವದಲ್ಲಿ ಪರಿಣಿತವಾದ ಒಬ್ಬ ನ್ಯಾಯವಾದಿಯ ಸಲಹೆ ಪಡೆದಿದ್ದರೆ, ಇಂಥ ಪ್ರಮಾದವಾಗುತ್ತಿರಲಿಲ್ಲದೇನೋ. ಅದೇ ರೀತಿ ಬ್ರಹ್ಮನಿಂದ ವರ ಪಡೆಯುವ ವೇಳೆ, ಆ ಕಾಲಕ್ಕೆ ಪ್ರಖ್ಯಾತನಾದ ಒಬ್ಬ

ವಕೀಲ (ಮೊದಲೇ ತನ್ನ ಸಂಗಡ ಕರೆದುಕೊಂಡು ಹೋಗಿ ಎಲ್ಲ ವ್ಯವಸ್ಥೆ ಮಾಡಿ) ನನ್ನು ವಿಚಾರಿಸಿ ತಾನು ಕೇಳುವ ವರದ ಪೂರ್ವ ಪಾಠವನ್ನು ಸಿದ್ಧಗೊಳಿಸಿಕೊಂಡಿದ್ದರೆ ಸರ್ವಾಮರತ್ವಸಿದ್ಧಿ ಸದಿದ್ದರೂ ತನ್ನ ಪ್ರಾಣಗಳನ್ನಾದರೂ (ಸಂಸ್ಕೃತದಲ್ಲಿ ಪ್ರಾಣಗಳು ಐದು) ಉಳಿಸಿಕೊಳ್ಳಬಹುದಾಗಿತ್ತು. (ಹಾಗಿದ್ದರೆ ರಾಮಾಯಣ ಈಗಿರುವ ರೀತಿಯಲ್ಲಿರುತ್ತಿರಲಿಲ್ಲವೆಂಬ ವಿಮರ್ಶಕರವಾದ ಗೌಣವಾಗುದು). ಇದ ರಿಂದ ನ್ಯಾಯವಾದಿಗಳು ಸಮಾಜದಲ್ಲಿ ತಮ್ಮ ಅನಿವಾರ್ಯತೆ ಎಷ್ಟು ಎಂಬ ಬಗ್ಗೆ ಮಿಸೆಯ ಮೇಲೆ ಕೈಹಾಕಿ ಹೇಳಬಹುದು.

(ಕೊನೆಯ ಭಾಗ ಮುಂದಿನ ಸಂಚಿಕೆಯಲ್ಲಿ)

ರಸ್ತೆ

ಇದು ನಮ್ಮೂರ ರಸ್ತೆ

ಹೇಳ ತೀರದು ಇದರ ಅವ್ಯವಸ್ಥೆ

ಬಸುರಿ ಹೆಂಗಸು ನಡೆದರೂ ಸಾಕು

ಹೆರಿಗೆ ಯಾಗದಿರುವುದೊಂದು ಜೋಕು!

—ವೆಂ. ವೆಂಕಟಸುಬ್ಬಯ್ಯ

ಹನಿಗಳು

—ಎಸ್. ವಿಶ್ವನಾಥ

ದ್ವಿ-ಪತ್ನಿತ್ವಕ್ಕೆ ದಂಡನೆಯೇ ಇಬ್ಬರು ಅತ್ತೆಂದಿರು

o o o o o o

ಸಿಗರೇಟು ತ್ಯಜಿಸುವುದು ಬಹು ಸುಲಭ :
ನಿಮಗೆ ಬೇಕಾದುದು : ಚಿತ್ ಶಕ್ತಿ
ಧೃಢ ಮನಸ್ಸು
ಮತ್ತು ಹಸೀ ಬೆಂಕಿ ಪೊಟ್ಟಣ

o o o o o o

ನೀವು ಹೇಳುವುದನ್ನೆಲ್ಲಾ ಜನ ನಂಬುತ್ತಾರೆ
ಆದರೆ ಒಂದೇ ಕಂಢೀರ್ಷ
ನೀವು ಹೇಳ ಬೇಕಾದುದನ್ನು ಪಿಸು ಮಾತಿನಲ್ಲಿ ಹೇಳಬೇಕು.

o o o o o o

ಒಬ್ಬರು ಮಾತನಾಡುತ್ತಿದ್ದರೆ ಅದು ಮಾನೋಲಾಗ್
ಇಬ್ಬರು ಹೆಂಗಸರು ಮಾತನಾಡುತ್ತಿದ್ದರೆ ಅದು ಕ್ಯಾಟಲಾಗ್ !

o o o o o o

ವಾದಗ್ರಸ್ಥ ಜಗಳದ ಎರಡು ಮುಖಗಳನ್ನೂ
ತಾಳ್ಮೆಯಿಂದ ಕೇಳುವ ಜನರೆಂದರೆ—
ಅಕ್ಕಪಕ್ಕದವರು ಮಾತ್ರ !

o o o o o o

ರಸ್ತೆಗಳು Dry ಆಗಿದ್ದಾಗ ಚಾಲಕ ಸುರಕ್ಷಿತ
ಚಾಲಕ Dry ಆಗಿದ್ದಾಗ ರಸ್ತೆಗಳು ಸುರಕ್ಷಿತ.

ನಂ ಕ್ಲಬ್ಬಿನಲ್ಲಿ

—ಆನಂದ್

ಟೆನ್ನಿಸ್ ಆಡಿ ಸುಧಾರಿಸಿಕೋತಾ ಕುಳಿತಿದ್ದೆ. ಅದೊ ಇದೊ ಮಾತಾಡುತ್ತಿದ್ದಾಗ, ರಾಜ ಹೇಳಿದ; "ಅಲ್ಕಣೋ, ಮೊನ್ನೆ ಸಂಜೆ ಟಿ.ವಿ.ನಲ್ಲಿ ಫ್ರೆಂಚ್ ಚಿತ್ರ ತೋರಿಸ್ತಾ ಇದ್ರು, Inheritors, ಅಂತ; ಚೆನ್ನಾಗಿತ್ತು. ಆದರೆ ಮಧ್ಯದಲ್ಲಿ ರಾಜೀವ್ ಗಾಂಧಿ ಪ್ರಮಾಣ ವಚನದ ಕಾರ್ಯಕ್ರಮ ತೋರಿಸಲಿಕ್ಕೆ ಚಲನಚಿತ್ರ ನಿಲ್ಲಿಸಬೇಕಾಯ್ತು" ಟೆನ್ನಿಸ್ ಆಡುಕ್ಕಲ್ಲದಿದ್ದರೂ ನೋಡುಕ್ಕೆ ಬರುವ ಸುಬ್ಬು (ಗಂಭೀರವಾಗಿ) ಉವಾಚ; "ಚಿತ್ರ ನಿಲ್ಲಿಸಿದ ಹಾಗೇನೂ ಆಗಲಿಲ್ಲವಲ್ರೋ!". ಯಥಾಪ್ರಕಾರ ಒಂದು ನಿಮಿಷ ಆದ ಮೇಲೆ ನಾನೂ ನಕ್ಕೆ!

o o o o o

"ರಾಜೀವ್ ಗಾಂಧಿ ದೇಶಕ್ಕೆ ಸಂದೇಶ ನೀಡ್ತಾರಂತೆ ಕಣ್ರೋ. ಬನ್ನಿ ನೋಡೋಣ" ಅಂತ ನಾಣಿ ನಮ್ಮನ್ನ ಟಿ.ವಿ. ರೂಮಿಗೆ ಕರೆದ. ಸ್ವಸ್ಥಾನ (ಬಾರ್) ಬಿಡಲು ಇಷ್ಟವಿಲ್ಲದಿದ್ರೂ, ಕಾಲೆಳೆಕೊಂಡು ಟಿ. ವಿ. ನೋಡಲು ಹೊರಟೆವು. ಸಂದೇಶ ಕೇಳಿದ ಮೇಲೆ ನಾಣಿ, "ನೋಡ್ರೋ Clean Government ಇರುತ್ತೆ ಅಂತ ಆಶ್ವಾಸನೆ ಕೊಟ್ಟಿದ್ದು ಸುಲಭ — ನಿಜವಾಗಿ ಹಾಗೇ ಆಗುತ್ತೇನೋ?" ಅಂದ. ಬಾಲು ನಿಧಾನವಾಗಿ, "ದೇಶಾದ್ಯಂತ They have Swept the Polls! ಇನ್ನೂ ಸರ್ಕಾರ ಕ್ಲೀನಾಗಿಡಬೇಕು ಅಷ್ಟೆ!" ಅನ್ನೋದೆ?

ಒಂದು ಸಿಂಹಾವಲೋಕನ

—ಸೋಮಿ

ಕಳೆದ ಚುನಾವಣೆಯಲ್ಲಿ ಏನಾಯಿತು ಎಂಬುದರ ಬಗೆಗೆ ಸಹಸ್ರಾರು ತಲಸ್ಪರ್ಶಿ ವಿಶ್ಲೇಷಣೆಗಳು ಈಗಾಗಲೇ ಹೊರಬಂದಿದ್ದು, ಏನನ್ನು ಸೂಚಿಸುತ್ತದೆ? ತಲಸ್ಪರ್ಶಿ ವಿಶ್ಲೇಷಣೆಗಳು ಮಾತ್ರ ಎಲ್ಲೆಡೆಯಲ್ಲಿ ಎಲ್ಲರಿಂದ ಬರುತ್ತಿದ್ದು ಅ–ತಲಸ್ಪರ್ಶಿ ವರದಿಗಳಾಗಲೀ ವಿಶ್ಲೇಷಣೆಗಳಾಗಲೀ ಎಲ್ಲಿಯೂ ಲಭ್ಯವಿಲ್ಲ. ಅದಕ್ಕಾಗಿಯೇ ಈ ಸಿಂಹ [ಜಂಬುಕ ?] ಅವಲೋಕನ.

ನಮ್ಮೂರಿನ ಕವಿ ಸಿಂಹರು ಚುನಾವಣೆಗೆ ಮೊದಲು ಹೇಳಿದ್ದು.

ಕವಿ ಸಿಂಹ :

ಇದೊಂದು non–issue ಚುನಾವಣೆ. ಚುನಾವಣೆ ಬಂದರೆ ಖರ್ಚಿಗೊಂದಿಷ್ಟು ಕಾಸು–ಕೊನೆಯ ಪಕ್ಷ ಒಂದು ಸಂತೆ ಖರ್ಚು ಸಿಕ್ಕಬಹುದೆಂದು ಕಾಯುವ ಜನ ಒಂದೆಡೆ. ಎಲೆಕ್ಷನ್ ಡ್ಯೂಟಿ ಬಿದ್ದು ಏನು ಛಾಲೆಂಜೋ, ಟೆಂಡರೋ, ಮತ ಪೆಟ್ಟಿಗೆ ಅಪಹರಣವೋ ಎಂದು ಗಾಬರಿಯಾದ ಅಲ್ಪಸಂಖ್ಯಾತರು ಒಂದೆಡೆ. ಪುಕ್ಕಟೆ ಮನರಂಜನೆ–ತಲೆ ನೋವುಗಳಿಗೆ ಸಂತಸ–ಭಯಗೊಂಡ ಜನ ಸಂದಣಿ ಒಂದೆಡೆ. ಇವರಾರಿಗೂ ರಾಷ್ಟ್ರದ ಸುಭದ್ರತೆ, ಇಂದಿನ ಇಂಡಿಯಾದ ಸಂದರ್ಭ, ಪಕ್ಷಗಳ ಪ್ರಣಾಳಿಕೆ ಇವುಗಳೊಂದೂ ಗೊತ್ತಿಲ್ಲ. ಇದು ಪ್ರಜಾ ಪ್ರಭುತ್ವಕ್ಕೆ ನಿಜವಾಗಿ ಒದಗಿರುವ ಗಂಡಾಂತರ.

ನಾನು ಸಾಕ್ಷಿಯಷ್ಟೆ. ನಿಷ್ಕ್ರಿಯನೂ ಹೌದು. ಪ್ರಣಾಳಿಕೆ ಏನೇ ಹೇಳಲಿ, ಅದನ್ನು ಸೃಷ್ಟಿಸಿದವರಿಗೂ ಅದರಲ್ಲಿ ನಂಬಿಕೆಯಿಲ್ಲವೆಂಬುದು ಇದುವರೆಗಿನ ಅನುಭವ.

ಬೊಮ್ಮ :

[ಗ್ರಾಮದಲ್ಲಿದ್ದುದನ್ನು, ಸೊಗಡನ್ನು ತ್ಯಜಿಸಿ ಗ್ರಾಂಥಿಕ ಭಾಷೆಗೆ ಪರಿವರ್ತಿಸಿದೆ]

'ಜಂತು' ಗೆ ಕೊಟ್ಟರೆ ರೇಟಿಳಿತವೆ. ಜಂತುವಿಗೆ ಕೊಡ್ರಿ ಅಂತ, ಸ್ವಾಮೇರು ಹೇಳಿ ಕಳಿಸಿದರಂತೆ. ಆ ಸ್ವಾಮೇರ ಶಿಷ್ಯರು ದಿನಾ ನಮ್ಮ ಮನೆ ಮ್ಯಾಲೆ ಕಲ್ಲು

ಒಸಿತರೆ. ದಿನಾ ರಂಪು, ಅಸ್ತ್ರಕ್ಕೆ ಕೊಡ್ರಿ ಅಂತ ಕೆಲವರು, ಅಲ್ಲೆಲ್ಲೋ ಬಲ್ಕಿಂ ಕೆಲಸಂತೆ ಬಲು ಜನ ಸತ್ರಂತೆ. ಅದೆಂಥದೋ ಗ್ಯಾಸಂತೆ ಅದರ್ರೂ ಬಲು ಕೆಲಸಂತೆ. ಅಸ್ತ್ರಕ್ಕೊಟ್ರೆ ಹೆಂಗೋ, ಜಂತುಗೆ ಕೊಟ್ರೆ ಹೆಂಗೋ, ಕಾಳಿಗೆ ರೊಕ್ಕಿಲ್ಲ. ಒಂದಿಪ್ಪತ್ತಿದ್ರೆ ಕೊಡ್ರಿ ಸ್ವಾಮಿ. ಆ ಸೊಸೈಟೀದು ಬಲು ಕೆಲ್ಸ. ಬಾಕ್ಲು ಮುಚ್ಚೈತೆ. ನಿನ್ನೆ ಬಸ್ ಟ್ಯಾಂಡಿನಾಗ ಹಂಗೆ ಕಾರು..........ಇಂಗಾದ್ರೆ ಹೆಂಗೆ ಸ್ವಾಮೀ ?

ಎರಿಗ :

ನಮಗೆ ಯಾತ್ಯಾತ್ರುದ್ದೂ ಸಿಗಲಿಲ್ಲ, ಎಳ್ನೀರಿನ ಟ್ರಾಟ್ರಿ ಎಲ್ಲೂ ಹೋಗ್ಲಿಲ್ಲ, ಅಸ್ತ್ರಕ್ಕೆ ಒತ್ತು ಅಂದ್ರು. ಎಲ್ಲೂ ಒಂದು ಹನಿ ಸಿಗ್ಲಿಲ್ಲ, ಎಂಥ ಎಲೆಕ್ಷನ್ ಬಿಡ್ರಿ.

ನಿನ್ನ ಪಾದದಾಣೆ, ನಾಕಾಣೆ ಗತಿಯಿಲ್ಲ, ಏಳು ರೂಪಾಯಿ ಕೊಡು. ನಿನ್ನೆ ದುಡಿಮಿಲ್ಲ. ಇವತ್ತಿಲ್ಲ. ಬಾಯಿ ಸುಟುಗುಟ್ತೈತೆ. ಅಲ್ಲೊಂದು ಹತ್ರ ಐತಂತೆ ಹೋಗಿ ಬರ್ತಿನಿ. ಈಗ್ಲೇ ಹಿಂಗಾದ್ರೆ ಮುಂದೆ ಹೆಂಗಪ್ಪ ಸ್ವಾಮಿ !

ಶೂರಯ್ಯ :

ಹೇಗಿದೆ ಸರ್ ನಿಮ್ಕಡೆ. ನಿಮಗೆ ಹೇಳಬೇಕೇ, ಎನ್‌ಲೈಟನ್ಡ್ ಓಟರ್ ನೀವು. ಇದು matter of life and death ! ದೇಶದ ಭದ್ರತೆ, ಸುವ್ಯವಸ್ಥೆ, ವಿರೋಧಿ ಪಕ್ಷಗಳ ಉಳಿವು, ಸ್ವಚ್ಛ ಆಡಳಿತ, ಜಾತಿ ಪಂಥಗಳ ನಿರಾಕರಣೆ. ಎಲ್ಲಾ ಅಂದರೆ everything in stake, ನೀವು ಹೇಳ್ರಿ ನಮ್ಮ ಮುತ್ತಿ ಹೆಂಗೆ. ಸಮಾಜವಾದ, ಸ್ವಚ್ಛಹಸ್ತ, influence ಎಲ್ಲಾ ಇರುವ ವ್ಯಕ್ತಿ. ನಿಮ್ಮ ಫ್ರೆಂಡು, ಏನಂದ್ರಿ ? ನೀವು ಓಟ್ಮಾಡೋದಿಲ್ಲೇ, ಎಂದೂ ಮಾಡಿಲ್ವೇ ? ನೀವು ಕರ್ತವ್ಯ ಭ್ರಷ್ಟರು, ನಿಮ್ಮಿಂದಲೇ ಈ ದುಷ್ಟ ವ್ಯವಸ್ಥೆ, ಜಾತೀಯತೆ, ವರದಕ್ಷಿಣೆ, ಶೋಷಣೆ ಅತ್ಯಾಚಾರಗಳು, ಒಳಹೊರಗಿನ ಅಪಾಯಗಳು ಬಲವಾಗಿರುವುದು. ಆದ್ರೆ ನಿಮ್ಮ ಓಟು ನಮಗೆ ಬೇಡ. . ನಮಗೆ ಓಟು ಕೊಡೋರು ಬೇರೆ. ನಮ್ಮದು major ಕಮ್ಯೂನಿಟಿ ನಮ್ಮ ಎಲ್ಲ ಪಂಗಡ, ಒಳಪಂಗಡಗಳೂ ಸಾಲಿಡ್ ರಾಕ್ ಆಗಿ ಸಪೋರ್ಟ್ ಮಾಡುತ್ತವೆ.

ಏನಂದೆ ? ಸಮಾಜವಾದವೇ ? ಮೈ ಬಾಯ್ ಇದು ಎಲೆಕ್ಷನ್, ಎಲ್ಲವೂ ಈಗ ಫೇರ್. ಯಾವ ವಾದವಾದರೇನು, ಓಟು ನಮ್ಮ ಬುಟ್ಟಿಗೆ. ಎಷ್ಟು ಜೋರು ಇದ್ದರೇನು, ಎದುರಾಳಿಗೆ ಕಟ್ಟೆಗೆ ಷೂರ್. ಬರ್ಕಳಲೇ ನಿನ್ನ ಹಣೆಮ್ಯಾಲೆ,

ನಮಗೆ, ನಿಮ್ಮಂಥರ್‍ನ ನಂಬಿದ್ರೆ ಓಟು ಬೀಳ್ತವೇ ? ಎಷ್ಟು ಜನನಲೇ ನೀವು, ಒಂದು ಲಕ್ಷದಗೆ ಐದು, ಭಾಳ ಅಂದ್ರೆ ಹತ್ತು. ಹೋಗ್ರೋ ಹೋಗ್ರೋ. ನಾಳೆ ನೋಡ್ಕೆ ವಂತ್ರಿ.

ಎಲೆಕ್ಷನ್ ನಂತರ :

ಶೂರಯ್ಯನವರು ಬಕ್ಕಪ್ಪಸ್ವಾಮಿ ಗುಡಿಗೆ ಹೋಗುತ್ತಿದ್ದರು. ಏನ್ರೀ ಇದು ಶಿರಗ ಮುರಗ ಅಂದೆ. 'ಏನ್ಮಾಡ್ತಿಯಲೇ, ನಮ್ಮರೇ ನುಮ್ಗ ....' ಎಂದರು. ತಾವು ತಲೆ ತಲಾಂತರದಿಂದ ಬಕ್ಕಪ್ಪನ ಭಕ್ತರು ಎಂದು ಸೇರಿಸಲು ಮರೆಯಲಿಲ್ಲ.

ಕೊಲ್ಲಗ :

ಪುಟಗಲ ಕಟ್ಟೆ ಮಜರೆ ಅರಬರಟ್ಟಿಯ ನಿವಾಸಿ. ಇವನಿ [illegible], ಎಡ ಗಣ್ಣುಗಳು ಮಾತ್ರ ಇವೆ. ಅಂಗವಿಕಲರ ಮಾಸಾಶನದಗಳಿಕೆಗಾಗಿ ಪೂರ್ವಭಾವಿ ಕಂಟೆಂಜೆನ್ಸಿಗೆಂದು ಮೂರು ವರ್ಷಗಳ ಹಿಂದೆ ನನ್ನಿಂದ ಇಪ್ಪತ್ತು ರೂಪಾಯಿ ಪಡೆದಿದ್ದ. ಅದು ಅವನನ್ನು ಬಸ್ ಸ್ಟ್ಯಾಂಡಿಗೂ ಕರೆದೊಯ್ಯಲು ಅಸಮರ್ಥ ವಾದಾಗ ನನಗೆ ಮತ್ತೆ ಶರಣಾಗತನಾದ. ಸಂಬಂಧಿಸಿದ ಎ. ದ. ಗುಮಾಸ್ತೆ ನನ್ನ ಶಿಷ್ಯನಾದುದರಿಂದ ಅವನಿಗೆ ಮಾಸಾಶನ ದೊರಕಿತು.

ಎಲೆಕ್ಷನ್ ಹಿಂದಿನ ದಿವಸ ನಾನು ಕುಂಚಿಗನಾಳು ಸಿಟಿಯಲ್ಲಿ ಬಸ್ಸಿಲ್ಲದೆ, ಲಾರಿ ಯೊಂದನ್ನು ಹತ್ತಿ, ಅರಬರಟ್ಟಿಯ ಮಾರ್ಗವಾಗಿ ಪ್ರಯಾಣ ಬೆಳೆಸಬೇಕಾಯಿತು. ಆ ಲಾರಿಗೆ ಹಿಂಗಾಲಿಯು ಕುಂಟು ಬಂದದ್ದರಿಂದ ಅರಬರಟ್ಟಿ ಬಳಿ ನಿಂತಿತು. ಆಗ ನನ್ನನ್ನು ಕಂಡು ನಮಸ್ಕರಿಸಿದ. ತನ್ನ ಮನೆಗೆ ಎಂದರೆ ಹನುಮಂತರಾಯನ ಗುಡಿಯ ಮುರುಕು ಪೌಳಿಗೆ ಕರೆದೊಯ್ದ. ನೀರು ಬೇಕೇ ಎಂದದ್ದಕ್ಕೆ ಬೇಡ ಎಂದೆ ನಾನು. 'ಪಾಡಾತು ಸ್ವಾಮಿ ನನ್ನ ನೀರಿನ ಗಡಿಗೆ ಮೇಲೆ ನಿನ್ನೆ ಕಲ್ಲು ಬಿದ್ದು ಒಡೆದು ಹೋತು ' ಎಂದ. ಅಗೋ ಅಲ್ಲಿ ಹಳ್ಳ ಐತಲ್ಲ ಅದೇ ನನ್ನ ಗಡಿಗೆ ಎಂದ. 'ಏನಾರ ತಿಂತೀಯಾ ಸ್ವಾಮಿ ' ಎಂದ, ಬೇಡ ಎಂದೆ.

'ಪಾಡಾತು ಸ್ವಾಮಿ, ಸಂಜೀಕೆ ಅಂತ ಒಂದು ಮುರುಕು ಮುದ್ದೆ ಇಟ್ಟಿದ್ದೆ ; ಯಾವಾಗ್ಲೋ ನಾಯಿ ಅದನ ಕಚ್ಗಂಡು ಹೋಗೆತೆ ' ಎಂದ.

'ಏನು ಸ್ವಾಮಿ ಯಾರಿಗ ಓಟು ಕೊಡನ ? '

‘ ಯಾರಿಗೆ ಕೊಡ್ತೀ ನೀನು ? ’

‘ ಅದೇ, ತಿಳಿವಲ್ದು. ನೀನು ಹೇಳಿದ್ದಕ್ಕೆ ಕೊಡ್ತಿನಿ.’

‘ ನಾನೇನು ಹೇಳ್ಲಪ್ಪ ? ಅದು ನಿಂಗೆ ಬಿಟ್ಟದ್ದು.’

‘ ಅವ್ವಾಂಗೆ ಕೊಡನ ಅಂತ ಮನಸ್ಸು. ನಿನ್ನೇನ್ಲೇ ಕೇಳದು. ಕೊಡ್ದೆ ಬಾದಿರು ನೋಡ್ಕೆಂತಿನಿ ಅಂತ ಅವರೆಲ್ಲ ಹೇಳ್ತರೆ. ಮಡಕೆಗೆ ಹಾಕನ ಅಂತ ಅಂದ್ರೆ, ... ಬ್ಯಾಡ್ಬಿಡು ಸ್ವಾಮಿ, ಯಾರು ಬಂದಾರು ? ’

‘ ನಿಂಗೆ ಆಧಂಗೇ ನೋಡು ನಂಗಾಗಿರದು.’

‘ ಐವತ್ತು ಸಾವ್ರ ಬಂದದವಂತೆ, ಕುಳ್ಡು ಕಾಸೂ ಕೈಗೆ ಹತ್ತಿಲ್ಲ. ಕೊಡಲ್ಲೇನೋ ನಿನ್ಗೆ ತಿಂಗ್ಳಾದುಡ್ಡು ಅಂತರೆ. ಮುಡ್ಕೇರೂ ಅಂತರೆ ಅಸ್ತದರೂ ಅಂತರೆ, ಇದರ ಮ್ಯಾಲೆ ನಮ್ಮ ತಿಮ್ಮಗ ಬ್ಯಾರೇ ನಿಂತದನೆ ಎಲೆಕ್ಷನ್ನಿಗೆ. ಕುಲ್ದರು ಕುಲ್ದರಿಗೆ ಕೊಡದಿದ್ರೆ ಇನ್ಯಾರು ಕೊಡ್ತರಲೇ ಅಂತರೆ.’

‘ ಸರಿ ಕೊಲ್ಲಗ, ರೊಕ್ಕ ಏನಾರ ಕೊಡ್ತಿದ್ದ್ಯಾ ? ’

‘ ಈಗ್ಲೇ ಏನ್ರಾ ಸಿಕ್ಕಿದ್ರೆ ಕೊಡನಾ ಅಂತ ಇದ್ದೆ.’

‘ ಮತ್ತೆ ಹೆಂಗೆ ’

“ ಎಲ್ಲ ಕುಲಗೆಟ್ಟು ಹೋತು.”

“ ಜಾತ್ಯತೀತತೆ, ಸುಭದ್ರತೆ, ಸುಭದ್ರ ವಿರೋಧೀ ಪಕ್ಷ, ದುರಾಡಳಿತದ ಅಂತ್ಯ, ಗಡಿಗಳ............”

“ ಅಯ್ಯೋ ನನ್ನ ತಂದೇ, ನಿಂಗ್ಯಾಕಪ್ಪ ಚನಗಿದ್ದನಿಗೆ ಹುಚ್ಚು ಹಿಡೀತು ? ”


“ ಅನುಕಂಪ ಮತ, ಇವುಗಳಲ್ಲಿ ಯಾವುದರ ಆಧಾರದ ಮೇಲೆ ನೀನು ಓಟು ಕೊಡ್ತೀ ? ”

“ ನೀನಾಡ ಇಂಗ್ಲೀಸ್ ನಂಗೆ ತಿಳಿಯಲಿಲ್ಲ, ತಿರುಪತಿ ತಿಮ್ಮಪ್ಪ ಹೆಂಗೆ ಹೊಳಸ್ತನೋ ಹಂಗೆ ನನ್ನ ಓಟು.”

ಛೋಟೇ ಮಿಯಾ :

ಯಾಕೇಳನೇ, ಇದೆಲ್ಲ ಅಲ್ಲ ತಗಿರಿ. ಇದು ಯಾತ್ರ ಫೈಟ್. ನೀವು ಏನಾರ ಹೇಳ್ರೀ ಬೆಂಗ್ಳೂರೇ ಬೆಂಗ್ಳೂರು. ಯಾಕೇಳನೇ ಪರ್ನಾಂಡೆಸ್ ಐದಾನಲ್ಲ, ಅವ್ನ

ಬರ್ಬೇಕ್ಕಣ್ರೀ. ಅವನು ಲೀಡರ್ ಕಣ್ರೀ. ಹೈಕ್ಲಾಸ್ ಲೀಡರ್. ಯಾರದರ್ರೀ ಅಪೋಸಿಷನ್ನು, ಪೆಂಗೈತೆ ಗೊತ್ತೇ, ಅವ್ರೇ ಹೊಡ್ದಾಡಿ ಸಾಯ್ತಾರೆ, ಇಗಳ್ರೀ ಬೆಟ್ಟು, ಎಷ್ಟು ಕಟ್ತರೀ. ಬ್ಯಾಂಕಿಗೆ ಒಂದು ಚೆಕ್ಕು ಕಟ್ಟದಿನೀ, ಅದ್ರಾಗೆಷ್ಟು ಕ್ಯಾಪೈತೋ ಇವತ್ತಿನ್ರೇಟಿಗೆ ಕಟ್ತೈನ್ರೀ. ಏನು ಕ್ಯಾಸ ಹೇಳು ತುಪ್ರೀ ನಾನೇಳಿದ್ದೇ ಬರದು. ನೀನಿನ್ನು ಬಚ್ಚ ತುಪ್ರೀ ನೀನು ಚಡ್ಡಿ ಹಾಕ್ಕೊಂಡು ಚೆನ್ನಿ ಕೋಲಾಡ್ತಿದ್ದಾಗ ನಾನು ಮೀಸೆ ತಿರುವ್ತಿದ್ದೆ. ನಾನು ಹೇಳ್ದೀ ಅಂದ್ರೆ ಕ್ಯಾಸ ಹಂಡ್ರೆಡ್ ಪರ್ಸೆಂಟ್, ರೈಟು ತುಪ್ರೀ ಯಾರದಾ ಬರ್ಲೀ. ಹೋದ್ರೆ ಕ್ಯಾಸ ಹೋಗ್ಲಿ, ನಂ ಪಾರ್ಟೀನೇ ಬಂದೀತು. ಆದ್ರೆ ವಾಜಪೇಯಿ ಬರುಬಕು ತಗೀರಿ. ಯಾಕೇಳನೇ.... ನಂ ಪೂಜಾರಿ.......ಬರ್ತಾನೆ ತಗೀರಿ.



"ನಮ್ಮ ಕಂಪನಿಯ ಕೃತಕ ಹಲ್ಲುಗಳ ಮಾರಾಟ ವೃಧಿಯಲ್ಲಿದೆ ಎಂದು ತಿಳಿಸಲು ಹರ್ಷಿಸುತ್ತೇನೆ"

ಯಾರು ಕಲಿತದ್ದು ಎಷ್ಟು ?

—ಶೇಷಗಿರಿ

ನಯ ವಿನಯ ಛಾಯ
ಹೀಗೆ ಎಷ್ಟೋ ಉದ್ದ ಗಿಡ್ಡ

ಪಡ್ಡೆ ಹುಡುಗಿಯರಿಗೆಲ್ಲ
ಕಲಿಸಿದ್ದೇ ಕಲಿಸಿದ್ದು ;

ಡಾಲ್ಟನ್ ಡಾರ್ವಿನ್ ಚಾರಲ್ಸ್ ಬಾಯಿಲ್ಸ್
ಪ್ರಕೃತಿಯ ಆಯ್ಕೆ ಉಳಿವಿಗಾಗಿ ಹೋರಾಟ

ಬಲಿಷ್ಠರ ಮೇಲ್ಗೈ
ಪಾಠ ಬೊಂಬಾಟ

ಸಾಕೇ ಎಂದರೆ ಸಾಕೇ ಸಾಕು
ಈಗ ನಯ ಹೆಂಗೆಳೆಯರ ನಾಯಕಿ

ವಿನಯ ಹಿನ್ನೆಲೆ ಗಾಯಕಿ
ಛಾಯ ಹರೆಯದ ಮುದುಕಿ

ನನ್ನಿಂದ ಇವರು ಕಲಿತದ್ದು
ಇವರನ್ನೆಲ್ಲಾ ಒದ್ದು ತದ್ದು


ಹೀಗೆಲ್ಲಾ ಮಾಡಿದ್ದೀತೇ ಅಂತ
ಹುಡುಕುತ್ತಿದ್ದೇನೆ ಬೆದಕಿ

ಭ್ರಮಣ

—ಶೇಷಗಿರಿ

ಎರಡು ದಶಕಗಳ ಹಿಂದೆ
ಇದೇ ದಾರಿ, ಇದೇ ಕರೀ ನೆಲ,
ನಿರ್ಜಲ
ಮೇ ಮೇ ಎನ್ನುವ ಕುರಿಗಳು
ಮತ್ತು ಮರಿಗಳು

ಎರಡು ದಶಕಗಳ ಅಂತರದ ನಂತರ
ಅದೇ ದಾರಿ, ಅದೇ ಕರಿ ನೆಲ
ನಿರ್ಜಲ
ಮೇ ಮೇ ಅನ್ನುವ ಕುರಿಗಳು ಮತ್ತು
ಕುರಿಮರಿಗಳು ಮಾತ್ರ ಬೇರೆ.



"ಬ್ಯಾಂಕ್ ಖಾತೆ ತೆರಿಯೋಕೆ ಐಡೆಂಟಿಫಿಕೇಷನ್ ಬೇಕು ಅಂದಿದ್ರಲ್ಲಾ,
ಅದಕ್ಕೆ ಕರ್ಕೊಂಬಂದೆ."



No. 23 AL 4-NT III

—: ಶುಭಾಶಯಗಳೊಂದಿಗೆ :—

ದಿ ಸಂಡೂರ್ ಮ್ಯಾಂಗನೀಸ್ ಅಂಡ್ ಐರ್ನ್‌ಓರ್ಸ್ ಲಿಮಿಟೆಡ್

ರಿಜಿಸ್ಟರ್ಡ್ ಮತ್ತು ಕಾರ್ಯ ನಿರ್ವಾಹಕ ಕಛೇರಿ :

"ಲೋಹಾದ್ರಿ ಭವನ"

ಯಶವಂತ ನಗರ್–583124 ಸಂಡೂರ್ ಮಾರ್ಗ (ಬಳ್ಳಾರಿ ಡಿಸ್ಟ್ರಿಕ್ಟ್)

ಕರ್ನಾಟಕ